ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2022


॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444

ಸಂಪುಟ-22 ಸಂಚಿಕೆ-2 ಪುಟಗಳು-10 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ನಗು ನಿಲ್ಲಿಸಿದ ಪ್ರಫುಲ್ಲಚಂದ್ರ



"ಸುದ್ದಿ ತಿಳಿದಾಗಲೇ ಗರ-ಬಡಿದಂತಾಗಿತ್ತು. ಮೂರನೇ ಮಹಡಿಯ ಅವರ ಮನೆ ಪ್ರವೇಶಿಸುತ್ತಿದ್ದಂತೆ ಕೈಕಾಲುಗಳಲ್ಲಿ ನಡುಕ. ಕ್ರಿಯಾಶೀಲತೆಯ ಕಾರಂಜಿಯಂತಿದ್ದ ದೇಹ ನಿಶ್ಚಲವಾಗಿ ಮಲಗಿದ್ದು ನೋಡಿ ಮನಸ್ಸು ದಂಗಾಗಿ ಹೋಗಿತ್ತು. ಇಹ-ಪರ-ಶೂನ್ಯಗಳ ಉಪನ್ಯಾಸ ಕಿವಿಯಲ್ಲಿ ಗುಣುಗುಟ್ಟುತ್ತಿತ್ತು. 'ಪ್ರಫುಲ್ಲಚಂದ್ರ ನಗು ನಿಲ್ಲಿಸಿದ' ಎಂದು ಮನಸ್ಸು ಹೇಳುತ್ತಿದ್ದಂತೆ ಅವರ ಒಡನಾಟದ ದಿನಗಳ ನೆನಪುಗಳ ಸರಮಾಲೆ ನೇಯ ತೊಡಗಿತ್ತು. "ಆಗ.....ಸುಮಾರು 35 ವರ್ಷಗಳ ಹಿಂದೆ..... ಉಡುಪಿ ಸಣ್ಣದಿತ್ತು. ರಥಬೀದಿಯದ್ದೇ ದೊಡ್ಡ ಹಿರಿಮೆ. ಮುದ್ದಣ ಮಾರ್ಗವೂ ಮಹತ್ವದ್ದಾಗಿರಲಿಲ್ಲ. ಅರೆ ನಗರ (Semi Urban) ಪ್ರದೇಶವಾಗಿದ್ದ ಉಡುಪಿ ತಾಲೂಕು ಕೇಂದ್ರವಾಗಿತ್ತಷ್ಟೆ. ನಮ್ಮ ಸಮಾಜದ ಕೆಲವು ಹಿರಿಯರು ಜನ ಮಾನಸದಲ್ಲಿ ಗುರುತಿಸಿಕೊಂಡಿದ್ದರು. ಯೋಗೀಂದ್ರರಾಯರು, ಬೈಲಕೆರೆ ನಾರಾಯಣರಾಯರು, ಅಂಬಲಪಾಡಿ ಕೃಷ್ಣರಾಯರು, ಡಾ| ಐ.ಕೆ.ಶಿವರಾಮರಾಯರು, ಉದ್ಯಾವರ ಅನಂತಕೃಷ್ಣರಾಯರು – ಈ ಕೆಲವು ಹೆಸರುಗಳು ನನ್ನಂತಹ ಸಾಮಾನ್ಯನವರೆಗೂ ಮುಟ್ಟಿದ್ದವು. "ನಮ್ಮ 'ಕಥೆ ಮುಗಿಸಿದ ಕಥಾನಾಯಕನ ಕಥೆ' ಆರಂಭವಾಗುವುದು ಇಲ್ಲಿಂದಲೇ ನನ್ನ ಜ್ಞಾನದ ಪರದೆಯ ಮೇಲೆ ಪಡಿಮೂಡಿದ್ದು ಶೃಂಗೇರಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ನನಗೆ ಮಣಿಪಾಲಕ್ಕೆ ವರ್ಗಾವಣೆಯಾಗಿ ಬಂದ ಕಾರಣ, ಕಾರಣಾಂತರದಿಂದ ಪ್ರಫುಲ್ಲಚಂದ್ರ ರಾಯರ ಪರಿಚಯವಾಯ್ತು. ಅವರ ತಂದೆ ಅನಂತಕೃಷ್ಣರಾಯರ ಭಾರತ್ ಸೈಕಲ್ ಅಂಗಡಿಯಲ್ಲಿ, ನನ್ನ ಸೈಕಲ್ ರಿಪೇರಿಗೆ ಹೋದಾಗ ಎಂದು ನೆನಪು ಅದಾಗಲೇ ಮಾರ್ಕೆಟ್‌ನಲ್ಲಿ ದಾಂಧಲೆ ಎಬ್ಬಿಸಿದ್ದ ಹೀರೋ ಹೋಂಡ ಬೈಕ್ ನನಗೆ ಅದೃಷ್ಟದ ಡ್ರಾ ದಲ್ಲಿ Allot ಆಗಿತ್ತು. ಪಡೆದುಕೊಳ್ಳುವ ಸಾಧ್ಯತೆ ಕಡಿಮೆಯಿದ್ದ ಕಾರಣ ನನಗೆ 500 ರೂ ಆಮಿಷ ನೀಡಿ ತನ್ನ ಅಣ್ಣ ಚಂದ್ರಶೇಖರ ರಾಯರಿಗೆ ಅದನ್ನು ಕೊಡಿಸಿದ್ದರು. "ಅವರ ವೃತ್ತಿ ಏನೆಂಬ ಪೂರ್ಣ ವಿವರ ನನಗೇನೂ ತಿಳಿದಿರಲಿಲ್ಲ. ಟೂರಿಸ್ಟ್ ಟ್ಯಾಕ್ಸಿಗಳು, ಸೈಕಲ್ ಬಿಡಿ ಭಾಗಗಳು, ರಿಪೇರಿ ಕೆಲಸಗಳು ಅವರ ಅಂಗಡಿಯಲ್ಲಿ ನಡೆಯುತ್ತಿತ್ತು. ಅವರ ವಿದ್ಯಾಭ್ಯಾಸ ಪೂರ್ಣಪ್ರಜ್ಞ ರಾತ್ರಿ ಕಾಲೇಜಿನಲ್ಲಿ ವಾಣಿಜ್ಯ ಪದವಿ ಪಡೆದು ಕಾಮರ್ಸ್ ಅಕೌಂಟ್‌ಗಳಲ್ಲಿ ಉತ್ತಮ ಪರಿಣಿತಿ ಪಡೆದುಕೊಂಡಿದ್ದರು. "ಸ್ಥಾನಿಕ ಬ್ರಾಹ್ಮಣ ಸಂಘ (ಆಗಿನ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ)ದ ಅವರ ಒಡನಾಟ ಆರಂಭವಾದದ್ದೂ ಉಡುಪಿ ರಥಬೀದಿಯ ಪರಿಸರದಲ್ಲೇ. ನಮ್ಮ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಬಹುತೇಕ ಸ್ಥಾಪಕ ಸದಸ್ಯರು ಸಂಜೆಯ ಬಿಡುವಿನ ವೇಳೆಯಲ್ಲಿ ಭಾರತ್ ಸೈಕಲ್ ವರ್ಕ್ಸ್‌ನ ಬಳಿ

(5ನೇ ಪುಟಕ್ಕೆ...)

## ಯುವ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ
ದಿನಾಂಕ 13-03-2022ನೇ ರವಿವಾರದಂದು ಬೆಳಿಗ್ಗೆ 9-00ಕ್ಕೆ
ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2022ನ್ನು**

ಏರ್ಪಡಿಸಲಾಗಿದೆ.

ಬಹುಮಾನಗಳ ಪ್ರಾಯೋಜಕರು :

- ಪ್ರಥಮ ಬಹುಮಾನ : ರೂ.10,000/- ಶ್ರೀ ಅಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ| ಶಾಂತಾ ಹಾಗೂ ದಿ| ಭುಜಂಗರಾಯರ ಸ್ಮರಣಾರ್ಥ
- ದ್ವಿತೀಯ ಬಹುಮಾನ : ರೂ.6,000/- ಶ್ರೀಮತಿ ಸುನಂದ ಹಾಗೂ ಶ್ರೀ ಸಿ.ಎಸ್.ರಾವ್, ಚಿಟ್ಪಾಡಿ
- ಸಮಾಧಾನಕರ ಬಹುಮಾನ : ಒಟ್ಟು ರೂ.6,000/- ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ| ಗಿರಿಜಮ್ಮ ಹಾಗೂ ದಿ| ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
- ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.5,000/-, ಶ್ರೀ ಬಿ. ಜಯರಾಮ ರಾವ್

**ಮಹಿಳೆಯರ ತ್ರೋಬಾಲ್ ಪಂದ್ಯಾಟ**

- ಪ್ರಥಮ ಬಹುಮಾನ : ರೂ.5,000/-
- ದ್ವಿತೀಯ ಬಹುಮಾನ : ರೂ.3,000/-

} ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ್ ರಾವ್, ಚಿಟ್ಪಾಡಿ

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಕ್ರಿಕೆಟ್‌ಪಂದ್ಯಾಟ ನಡೆಯಲಿದೆ.**

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಸಹಕರಿಸುವವರು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

ಆಸಕ್ತ ತಂಡಗಳು ಸಂಘದ ಕಾರ್ಯದರ್ಶಿ ಶ್ರೀ ಪಿ. ಪ್ರಭಾಕರ ಭಂಡಿ (9449254846), ಯುವವೇದಿಕೆಯ ಅಧ್ಯಕ್ಷರಾದ ಎಮ್. ಸಂತೋಷ್ ರಾವ್, ಚಿಟ್ಪಾಡಿ (9448409802), ಜೊತೆಕಾರ್ಯದರ್ಶಿ ವಿನೋದ್‌ಕುಮಾರ್ (8310966892), ಡಾ| ವಿಜಯ ವೈ.ಬಿ., ಮಹಿಳಾ ವಿಭಾಗದ ಅಧ್ಯಕ್ಷರು (9448164327) ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 06-03-2022ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

– ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

## ಮಹಿಳಾ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ತಾ.13-03-2022ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ

ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ **ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು ಹಾಗೂ ಎಮ್.ಜಿ.ಎಮ್. ಕ್ರೀಡಾಂಗಣದಲ್ಲಿ **ತ್ರೋಬಾಲ್ ಪಂದ್ಯಾಟ**ವನ್ನು ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಪ್ರಿಯರೇ,


ಸ್ವಸ್ತಿ! ಶ್ರೀ ಪ್ಲವ ನಾಮ ಸಂ|ರದ
ಮೀನ ಸಂಕ್ರಮಣ ತಾ.14-03-2022ನೇ ಸೋಮವಾರ
**ಶ್ರೀ ಶಾರದಾ ದೇವಸ್ಥಾನದ**
**ಪ್ರತಿಷ್ಠಾ ವರ್ಧಂತಿಯು**
ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

-ಆಡಳಿತ ಮಂಡಳಿ

ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ, ಪಾರಾಯಣ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ – 576 102.

### ಮಹಾಶಿವರಾತ್ರಿಯ ಆಮಂತ್ರಣ




ಭಕ್ತಾಭಿಮಾನಿಗಳೇ,

ತಾ.01-03-2022, ಮಂಗಳವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯುನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ। ರಜತ್ ಹಾಗೂ ಚಿ। ನವ್ಯಾ

ತಾ.23.01.2022ನೇ ಆದಿತ್ಯವಾರ ಸುಳ್ಯ ಕುಂಭಕ್ಕೋಡು ಕಸ್ತೂರಿ ಅಚ್ಯುತ ಭಟ್ ಶಶಿಕಲಾ ಮಂದಿರದಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

–: ಶುಭ ಕೋರುವ :–

ಶ್ರೀಮತಿ ಭಾರತಿ ಮತ್ತು ಶ್ರೀ ಕೃಷ್ಣ ರಾವ್, ಕುಂಜಾರು, ಉಡುಪಿ
ಶ್ರೀಮತಿ ಭುವನೇಶ್ವರಿ ಮತ್ತು ಶ್ರೀ ಚಿತ್ತರಂಜನ್ ರಾವ್, ಸುಳ್ಯ

## ನೂತನ ವಧೂವರರಿಗೆ ಅಭಿನಂದನೆಗಳು




### ಚಿ। ಕಾರ್ತಿಕ್ ಹಾಗೂ ಚಿ। ಸೌ। ಕಾವ್ಯ

ತಾ.07.02.2022ನೇ ಸೋಮವಾರ ನೀಲಾವರ "ಶ್ರೀ ಗಂಗಾ ವಿಶ್ವೇಶ್ವರ ಸಭಾಭವನವ"ದಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

–: ಶುಭ ಕೋರುವ :–

ಶ್ರೀಮತಿ ಆಶಾಲತಾ ಮತ್ತು ಶ್ರೀ ಪೆರ್ಣಂಕಿಲ ಶ್ರೀನಿವಾಸ ರಾವ್, ಪರ್ಕಳ
ಶ್ರೀಮತಿ ಶಕುಂತಳ ಮತ್ತು ಶ್ರೀ ಪೆರ್ಣಂಕಿಲ ನಿರಂಜನ ರಾವ್, ಮಣಿಪಾಲ
ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಪ್ರಕಾಶ ರಾವ್, ಸತಾರ
ಶ್ರೀಮತಿ ಡಾ। ಚೈತ್ರ ಮತ್ತು ಶ್ರೀ ಹೃಷಿಕೇಶ್, ಮಂಗಳೂರು

## ನೂತನ ವಧೂವರರಿಗೆ ಅಭಿನಂದನೆಗಳು




### ಚಿ। ರೋಹಿತ್ ಹಾಗೂ ಚಿ। ಸೌ। ಲಾಸ್ಯ

ತಾ.06.02.2022ನೇ ಆದಿತ್ಯವಾರ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಇಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

–: ಶುಭ ಕೋರುವ :–

ಶ್ರೀ ಮಾಧವರಾವ್ ಉಂಡಾರು, ಇನ್ನಂಜೆ
ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಕೃಷ್ಣಾನಂದ ರಾವ್, ಉಂಡಾರು
ಶ್ರೀಮತಿ ದೀಕ್ಷಾ ಮತ್ತು ಶ್ರೀ ಪವನ್ ರಾವ್, ಮಂಗಳೂರು
ಶ್ರೀಮತಿ ಶೋಭಾ ಮತ್ತು ಶ್ರೀ ಜಯರಾಮರಾವ್, ಬಾರ್ಕೂರು
ಶ್ರೀ ಹರ್ಷಿತ್ ರಾವ್, ಬಾರ್ಕೂರು

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ। ಪ್ರದೀಪ ಹಾಗೂ ಚಿ। ಸೌ। ಶರಧಿ

ತಾ.23.01.2022ನೇ ಆದಿತ್ಯವಾರ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಇಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

–: ಶುಭ ಕೋರುವ :–

ಶ್ರೀಮತಿ ಹರ್ಷಿನಿ ಮತ್ತು ಶ್ರೀ ಸಚ್ಚಿದಾನಂದ ರಾವ್, ಪಡುಬೆಳ್ಳೆ
ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಶಂಕರ ಕನಕ
ಶ್ರೀಮತಿ ಮಲ್ಲಿಕಾ ಮತ್ತು ಶ್ರೀ ಭವಾನಿ ಶಂಕರರಾವ್ ಹಾಗೂ ಸಹೋದರ ಸಹೋದರಿಯರು, ಪಡುಬೆಳ್ಳೆ
ಶ್ರೀಮತಿ ಮಂಜುಳ ಮತ್ತು ಶ್ರೀ ಎಂ ವಿ ಸುಬ್ರಾಯ ಹಾಗೂ ಮಕ್ಕಳು
ಶ್ರೀ ವರುಣ ರಾವ್

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala


ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com
Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ,) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ–576102

# ವಿದ್ಯಾರ್ಥಿ ವೇತನ ವಿತರಣೆ– ಒಂದು ಅವಲೋಕನ

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸಂಸ್ಥೆಯು ಸ್ಥಾನಿಕ ಸಮಾಜದ ಹೆಮ್ಮೆಯ ಸಂಕೇತ. ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ದೇವಸ್ಥಾನ, ಜ್ಞಾನ ಮಂದಿರ ಮೊದಲಾದ ಬೇರೆ ಬೇರೆ ಕಟ್ಟಡಗಳಿಂದ ಶೋಭಿತವಾದ ಇದು ಶ್ರೀ ಶಾರದಾ ಮಂಟಪ ಸಂಕೀರ್ಣವೆಂದೇ ಪ್ರಚಲಿತವಾಗಿದೆ. ನಮ್ಮ ಸಮಾಜದ ಕನಿಷ್ಠ ವರಮಾನದವರಿಗೂ ಅತ್ಯಂತ ಸುಸಜ್ಜಿತ ಸೌಲಭ್ಯಗಳನ್ನು ಸುಲಭ ಸಾಧ್ಯವಾದ ದರದಲ್ಲಿ ಒದಗಿಸಿ ಸಮಾಜದ ಎಲ್ಲ ವರ್ಗದವರಿಗೂ ಸಹಾಯವಾಗಬೇಕೆಂಬ ಕಲ್ಪನೆಗಳನ್ನ ಇಟ್ಟುಕೊಂಡು ಸ್ಥಾಪಿತವಾದ ಸಂಸ್ಥೆ. ಸ್ಥಾಪಕರ ಈ ತತ್ವಗಳನ್ನೇ ಇದುವರೆಗೆ ಆಗಿಹೋದ ಎಲ್ಲಾ ಆಡಳಿತ ಮಂಡಳಿಗಳೂ ಅದನ್ನು ಮತ್ತೂ ಸುಧಾರಿಸಿ ಮುಂದುವರಿಸಿಕೊಂಡು ಬಂದಿವೆ ಎಂದರೆ ಅತಿಶಯೋಕ್ತಿಯಲ್ಲ. ಹೀಗಾಗಿ ಇಂದಿನವರೆಗೂ ಶ್ರೀ ಶಾರದಾ ಮಂಟಪ ಸಂಕೀರ್ಣ ನಮ್ಮವರೆಲ್ಲರ ಪ್ರೀತಿಯ ಕಣ್ಮಣಿ.

ಸಂಘದ ಪ್ರಮುಖ ಯೋಜನೆಗಳಲ್ಲಿ ಒಂದಾದ ವಿದ್ಯಾರ್ಥಿ ವೇತನ ವಿತರಣೆಯು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಅತಿದೊಡ್ಡ ಕಾರ್ಯಕ್ರಮವಾಗಿದೆ. ವಾರ್ಷಿಕ ಒಂದುಸಲ ಪಿಯುಸಿ ಮತ್ತು ಮೇಲ್ಪಟ್ಟ ತರಗತಿಗಳ ಹಾಗೂ ವೃತ್ತಿಪರ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ನಿಗದಿತವಾಗಿ ಈ ವಿದ್ಯಾರ್ಥಿವೇತನ ವಿತರಣೆ ನಡೆಯುತ್ತಿದೆ. ಹಾಗೆಯೇ ವಿದ್ಯಾರ್ಥಿವೇತನಕ್ಕಾಗಿ ಸಂಬಂಧಪಟ್ಟ ಅರ್ಜಿಯಲ್ಲಿ ಮನವಿ ಸಲ್ಲಿಸಿದಾಗ ವಿದ್ಯಾರ್ಥಿ ವೇತನ ವೇದಿಕೆಯು ಅದನ್ನು ಪರಿಶೀಲಿಸಿ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುತ್ತದೆ. ಬಹಳ ಹಿಂದೆ 300–500 ರೂ.ಗಳಷ್ಟು ಮಾತ್ರ ಕೊಡುತ್ತಿದ್ದ ವಿದ್ಯಾರ್ಥಿವೇತನವನ್ನು ಕಾಲ ಕಾಲಕ್ಕೆ ಏರಿಸುತ್ತಾ ಇದೀಗ 3000/ರೂ.ಗಳ ವರೆಗೂ ವಿತರಿಸಲಾಗುತ್ತಿದೆ. ಅಂದರೆ ವಾರ್ಷಿಕ ರೂ.3.50 ಲಕ್ಷದಿಂದ ರೂ.4.00ಲಕ್ಷದವರೆಗೂ ವಿದ್ಯಾರ್ಥಿವೇತನವಾಗಿ ವಿತರಿಸುತ್ತಿದೆ. ಸಂಘದ ವಿದ್ಯಾರ್ಥಿವೇತನ ನಿಧಿಯಲ್ಲಿನ ನಿರಖು ಠೇವಣಿ ಮೊತ್ತದ ಬಡ್ಡಿಯನ್ನು ಮಾತ್ರ ವಿದ್ಯಾರ್ಥಿವೇತನವಾಗಿ ವಿತರಿಸಲಾಗುತ್ತದೆ.

ವಿದ್ಯಾರ್ಥಿವೇತನಕ್ಕಾಗಿ ಸಂಘವು ಅರ್ಜಿಫಾರಂಗಳನ್ನು ಅಚ್ಚು ಹಾಕಿಸಿದ್ದು, ಸಂಘದ ಈ ಅಧಿಕೃತ ಫಾರಂನಲ್ಲಿಯೇ ಅರ್ಜಿ ಸಲ್ಲಿಸಬೇಕು. ಫಾರಂನಲ್ಲಿಯೇ ಅದರ ನಿಯಮಗಳನ್ನೂ ಮುದ್ರಿಸಿದ್ದು, ಫಲಾನುಭವಿಗಳು ಈ ನಿಯಮಗಳಂತೆ ಅರ್ಜಿ ಸಲ್ಲಿಸುವುದು, ವಿದ್ಯಾರ್ಥಿ ವೇತನ ವೇದಿಕೆಯು ಅದನ್ನು ಪರಿಶೀಲಿಸಿ ವಿದ್ಯಾರ್ಥಿ ವೇತನ ಮಂಜೂರು ಮಾಡುವುದು, ಇದುವರೆಗೆ ನಡೆದುಕೊಂಡು ಬಂದ ಪದ್ಧತಿ.

ಇತ್ತೀಚಿನ ವರ್ಷಗಳಲ್ಲಿ ಅಪೂರ್ಣವಾಗಿ ಭರ್ತಿಗೊಳಿಸಿದ ಕಾಲಂಗಳೇ ಕಾಣಿಸಿ ಕೊಳ್ಳುತ್ತವೆ. ನಿಯಮಗಳಲ್ಲಿದ್ದಂತೆ "ಭರ್ತಿಗೊಳಿಸಿದ ಅರ್ಜಿಯನ್ನು ಶಿಫಾರಸ್ಸುದಾರರ ಸಹಿಯೊಂದಿಗೆ ಸಂಘದ ಕಛೇರಿಗೆ ತಲುಪಿಸುವುದು" ಎಂದಿದೆ. ಸಂಘದ ಆಡಳಿತ ಮಂಡಳಿಯ ಸದಸ್ಯರು, ಹಿಂದಿನ ಆಡಳಿತ ಮಂಡಳಿಗಳ ಸದಸ್ಯರು, ಪದಾಧಿಕಾರಿಗಳು, ಅಥವಾ ತಾವು ಯಾವ ಊರಿನ ಸ್ಥಾನಿಕ ಸಮಾಜದ ಸಂಘಟನೆಯ ಸದಸ್ಯರೋ ಅದರ ಪದಾಧಿಕಾರಿಗಳ ಹೆಸರು ಮತ್ತು ಸಹಿಯ ಶಿಫಾರಸ್ಸಿನೊಂದಿಗೆ ಶ್ರೀ ಶಾರದಾ ಮಂಟಪಕ್ಕೆ ಕಳುಹಿಸಬೇಕು. ಇದು ಬಹಳ ಪ್ರಾಮುಖ್ಯ. ಯಾವುದೇ ಶಿಫಾರಸ್ಸು ಇಲ್ಲದೆ ಇರುವಾಗ ವಿದ್ಯಾರ್ಥಿವೇತನ ವೇದಿಕೆಯ ಸದಸ್ಯರು ಅಲ್ಲಿನ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಸಂಪರ್ಕಿಸಿ ಸಮಾಲೋಚನೆ ಮಾಡಿ ವಿದ್ಯಾರ್ಥಿವೇತನ ಮಂಜೂರು ಮಾಡಿರುವ ಅನೇಕ ಸಂದರ್ಭಗಳೂ ಇವೆ. ಯಾಕೆಂದರೆ ವೇದಿಕೆಯ ಸದಸ್ಯರಿಗೆ ಸಮಾಜದ ಎಲ್ಲಾ ವಿದ್ಯಾರ್ಥಿಗಳ ಹತ್ತವರ ಪರಿಚಯ ಇರುವುದಿಲ್ಲತಾನೆ? ಅಷ್ಟು ಮಾತ್ರವಲ್ಲದೆ ಈ ವಿದ್ಯಾರ್ಥಿವೇತನ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಬಿಟ್ಟು ಬೇರೆಯವರಿಗೆ ಸೇರಬಾರದು ಎನ್ನುವುದು ಸಂಘದ ಕಾಳಜಿ.

ಇನ್ನೊಂದು ಮುಖ್ಯ ಸಂಗತಿ ಏನೆಂದರೆ "ಕುಟುಂಬದ ಆದಾಯ 3 ಲಕ್ಷ ರೂ/– ಒಳಗಿನವರು ಮಾತ್ರ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು" ಎಂಬ ನಿಯಮವಿದೆ. ಆದರೆ ಸಾಕಷ್ಟು ಆರ್ಥಿಕ ವರಮಾನವಿರುವವರೂ, ಉದ್ಯೋಗವಂತರೂ, ಉದ್ಯಮಿಗಳೂ (ಇವರು ಈ ನಿಧಿಗೆ ದೇಣಿಗೆ ನೀಡಲು ಅರ್ಹರಿದ್ದೂ) ಇಲ್ಲಿ ಅರ್ಜಿಸಲ್ಲಿಸಿ ವಿದ್ಯಾರ್ಥಿವೇತನ ಪಡೆದುಕೊಂಡಿದ್ದಾರೆ. ಇದುವರೆಗಿನ ಆಡಳಿತ ಮಂಡಳಿಯ ಮೃದು ಧೋರಣೆ ಮತ್ತು ಉದಾರ ನೀತಿಯ ದೆಸೆಯಿಂದ ಇವೆಲ್ಲವೂ ನಡೆದು ಹೋಗಿದೆ. ಇದರಿಂದ ಅರ್ಹರಾದವರು ಸಿಗುವ ಮೊತ್ತದಲ್ಲಿ ಕಡಿಮೆ ಪಡೆಯುವಂತಾಗಿ ವಂಚಿತರಾಗಿದ್ದಾರೆ. ಇದನ್ನು ಸಮಾಜ ಬಾಂಧವರು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ.

"ಡಾ। ದಯಾನಂದರಾವ್ ಸಾಲ ವಿದ್ಯಾರ್ಥಿ ವೇತನ"ವನ್ನು ಸಂಘವು ನಿಯಮಿತವಾಗಿ ನೀಡುತ್ತಾ ಬಂದಿದೆ. ದಿವಂಗತ ಡಾ। ದಯಾನಂದರಾವ್ ತಮ್ಮ ಟ್ರಸ್ಟ್ ವತಿಯಿಂದ ಪ್ರತಿವರ್ಷ ಸಂಘಕ್ಕೆ ನೀಡಿದ ಮೊತ್ತವನ್ನು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳ ಬೇಡಿಕೆಯಂತೆ ಉಡುಪಿಯ ಶ್ರೀಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಮೂಲಕ ಬೇಕಾದ ಕಾಗದ ಪತ್ರಗಳನ್ನು ಸಿದ್ಧಗೊಳಿಸಿ ಸಾಲವಾಗಿ ವಿತರಿಸಲಾಗುತ್ತದೆ. ಮುಂದೆ ಪ್ರತಿವರ್ಷ ಅವನ/ಅವಳ ವಿದ್ಯಾಭ್ಯಾಸಕ್ಕೆ ಹಣದ ಅವಶ್ಯಕತೆ ಇದ್ದರೆ ಅವರ ಬೇಡಿಕೆಯಂತೆ ಲಭ್ಯವಿರುವ ಮೊತ್ತವನ್ನು ಮತ್ತೆ ಕೂಡಾ ಸಾಲವಾಗಿ ವಿತರಿಸಲಾಗುತ್ತದೆ. ಅವನ/ಅವಳ ವಿದ್ಯಾಭ್ಯಾಸದ ವರ್ಷಗಳಲ್ಲಿ ಸಾಲದ ಬಡ್ಡಿಯನ್ನು ಸ್ಥಾನಿಕ ಬ್ರಾಹ್ಮಣ ಸಂಘವು ನಿರ್ವಹಿಸುತ್ತದೆ. ವಿದ್ಯಾಭ್ಯಾಸ ಮುಗಿದ ಮರುವರ್ಷದಿಂದ ಅಸಲಿನೊಂದಿಗೆ ಬಡ್ಡಿಯನ್ನೂ ಸಾಲಗಾರನೇ ಮರುಪಾವತಿ ಮಾಡುತ್ತಾನೆ. ಸಂತೋಷದ ವಿಚಾರವೇನೆಂದರೆ ಈ 10–12 ವರ್ಷಗಳಲ್ಲಿ ಸುಮಾರು 90 ವಿದ್ಯಾರ್ಥಿಗಳು ಈ ಸೌಲಭ್ಯದ ಸದುಪಯೋಗವನ್ನು ಪಡೆದುಕೊಂಡಿದ್ದಾರೆ. ಇದಲ್ಲದೆ ಕೃತಜ್ಞತಾಪೂರ್ವಕವಾಗಿ ಸಾಲದ ಮರುಪಾವತಿಯನ್ನೂ ಕ್ಲಪ್ತ ಸಮಯಕ್ಕಿಂತಲೂ ಮೊದಲೇ ಮಾಡಿರುತ್ತಾರೆ ಎಂದರೆ ಹೆಮ್ಮೆಯ ವಿಚಾರ.

ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ (ಮೂರೂ ವಿಭಾಗಗಳು)ಯ ವಿದ್ಯಾರ್ಥಿಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ನಮ್ಮ ಸಮಾಜದ ನಾಲ್ವರು ವಿದ್ಯಾರ್ಥಿಗಳಿಗೆ ಪ್ರತಿವರ್ಷ "ಉದಯಚಂದ್ರ ಪ್ರತಿಭಾ ಪುರಸ್ಕಾರ" ನೀಡಿ ಗೌರವಿಸಲಾಗುತ್ತದೆ. ಈ ಪುರಸ್ಕಾರಗಳೂ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಇದಕ್ಕಾಗಿ ಪ್ರತಿವರ್ಷ ಈ ತರಗತಿಗಳಲ್ಲಿ 85% ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅರ್ಜಿಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**ಬ್ಯಾಂಕಿನ ಖಾತೆ ವಿವರ :**
**Vidyarthi Vethana Vedike**
**Karnataka Bank, Kunjibettu Branch,**
**SB A/c No : 8032500100444001**
**IFSC Code : KARB0000803**

**ಮಾಹಿತಿಗಾಗಿ ಸಂಪರ್ಕಿಸಿ :**
**ಶ್ರೀ ಕೃಷ್ಣ ಕುಮಾರ್ ಮಟ್ಟು : 9481760611**
**ಶ್ರೀ ಪಿ. ಪ್ರಭಾಕರ್ ಭಂಡಿ : 9449254846**

ಯಾವುದೇ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ರ್‍ಯಾಂಕ್ ಬಂದ ವಿದ್ಯಾರ್ಥಿಗಳಿಗೆ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಗುತ್ತದೆ. ಇದರಲ್ಲಿಯೂ ನಗದು ಬಹುಮಾನದೊಂದಿಗೆ ಪ್ರಶಸ್ತಿಪತ್ರವೂ ಸೇರಿರುತ್ತದೆ.

"ಹಿಮಾಂಶು ಸ್ಮಾರಕ ದತ್ತಿ ನಿಧಿ"ಯನ್ನು ಸ್ಥಾಪಿಸಲಾಗಿದೆ. ವೈದ್ಯಕೀಯಕ್ಕೆ ಸಂಬಂಧಿಸಿದ ಯಾವುದೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಓರ್ವ ವಿದ್ಯಾರ್ಥಿಗೆ ಇದರ ಪ್ರತಿ ವರ್ಷದ ಬಡ್ಡಿಯನ್ನು ನೀಡಿ ಪ್ರೋತ್ಸಾಹಿಸಲಾಗುತ್ತದೆ. ಈ ಬಗ್ಗೆ ಅರ್ಹರನ್ನು ವಿದ್ಯಾರ್ಥಿವೇತನ ವೇದಿಕೆಯು ಆಯ್ಕೆ ಮಾಡುತ್ತದೆ.

ಸಂಘದ ಮೂಲಕ ನಡೆಯುವ ಈ ವಿದ್ಯಾರ್ಥಿವೇತನ ವಿತರಣೆಯು ಇಷ್ಟೆಲ್ಲಾ ಕ್ರಮಬದ್ಧವಾಗಿ ನಡೆಯುವುದಾದರೂ ಕೊಡುವ ಮೊತ್ತ ಬಹಳ ಸಣ್ಣದು ಎಂದು ಎಲ್ಲರಿಗೂ ತಿಳಿದ ವಿಚಾರ. ಈ ಮೊತ್ತವನ್ನು ಹೆಚ್ಚಿಸಬೇಕೆನ್ನುವುದು ಎಲ್ಲರ ಬೇಡಿಕೆ. ಅದಕ್ಕಾಗಿ ಈ ವರ್ಷದಿಂದ ಸಂಘದ ಆದಾಯದ ಒಂದು ಅಂಶವನ್ನು ವಿದ್ಯಾರ್ಥಿ ವೇತನ ನಿಧಿಗೆ ತುಂಬಿಸಬೇಕೆನ್ನುವುದು ವಿದ್ಯಾರ್ಥಿವೇತನ ವೇದಿಕೆಯ ಕಳಕಳಿಯ ಮನವಿ.

**ಇನ್ನು ದಾನಿಗಳಿಂದಲೂ ಈ ನಿಧಿಗೆ ಹಣ ಸಂಗ್ರಹಿಸಲಾಗುತ್ತಿದೆ. ಇದಲ್ಲದೆ ಈ ವಿದ್ಯಾರ್ಥಿ ವೇತನ, ಸಾಲ ವಿದ್ಯಾರ್ಥಿವೇತನ, ಅಥವಾ ಪುರಸ್ಕಾರಗಳನ್ನು ಪಡೆದ ಎಲ್ಲ ವಿದ್ಯಾರ್ಥಿಗಳಲ್ಲಿಯೂ ಮನವಿ ಮಾಡುತ್ತಿದ್ದೇವೆ. ನೀವು ಒಂದಾನೊಂದು ಸಂದರ್ಭದಲ್ಲಿ ಸಂಘದ ಮೇಲಿನ ಯಾವುದೇ ಫಲಾನುಭವಿಗಳಾಗಿರುತ್ತೀರಿ. ಇದೀಗ ನೀವು ನಿಮ್ಮದೇ ಉದ್ಯೋಗ ಅಥವಾ ಉದ್ಯಮ ನಡೆಸುತ್ತಾ ಸಮಾಜದಲ್ಲಿ ಗಣ್ಯರೆನಿಸಿದ್ದೀರಿ. ನಿಮ್ಮ ಆದಾಯದ ಸ್ವಲ್ಪ ಅಂಶವನ್ನು ಈ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ ನೀಡುವ ಮನಸ್ಸು ಮಾಡಬೇಕೆಂದು ವಿನಂತಿ. ನಿಮ್ಮ ದೇಣಿಗೆ ದೊಡ್ಡ ಮೊತ್ತವೇ ಆಗಿರಬೇಕೆಂದು ನಾವು ಬಯಸುವುದಿಲ್ಲ. "ಹನಿ ಹನಿ ಕೂಡಿ ಹಳ್ಳ" ಎಂಬಂತೆ ನಿಮ್ಮ ಸಾಧ್ಯತೆ ಎಷ್ಟೋ ಅಷ್ಟನ್ನಾದರೂ ದಾನ ರೂಪದಲ್ಲಿ ನೀಡಿ ಸಂಘಕ್ಕೆ ಕೃತಜ್ಞತೆ ಸಲ್ಲಿಸಲು ಅವಕಾಶವಿದೆ. ದಯಮಾಡಿ ಇದಕ್ಕೆ ಸ್ಪಂದಿಸುವಿರೆಂದು ನಂಬಿದ್ದೇವೆ. ಆ ಮೂಲಕ ಮುಂದಿನ ವಿದ್ಯಾರ್ಥಿಗಳಿಗೆ ಇದಕ್ಕಿಂತಲೂ ಒಳ್ಳೆಯ ಮೊತ್ತವನ್ನು ಕೊಡಲು ಸಾಧ್ಯವಾಗುತ್ತದೆ ಎಂದು ನಮ್ಮ ಆಶಯ.**

**–ಕೃಷ್ಣಕುಮಾರ್ ರಾವ್ ಮಟ್ಟು.**
ಅಧ್ಯಕ್ಷರು, ವಿದ್ಯಾರ್ಥಿ ವೇತನ ವೇದಿಕೆ


## ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011–12ರಿಂದ 2016–17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**
ಪ್ರಧಾನ ಕಛೇರಿ (☏ 2522408) ಪಡುಬಿದ್ರಿ ಶಾಖೆ (☏ 2556608) ಕೋಟೇಶ್ವರ ಶಾಖೆ (☏ 9341854114) ಬ್ರಹ್ಮಾವರ ಶಾಖೆ (☏ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ


## ಶ್ರೀಶಾರದಾ ವೇದಿಕೆಯ ಮಹಾಪೋಷಕರು

**ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು**

## ಪಿ.ಗುರುರಾಜ ರಾವ್ ದಂಪತಿಗಳಿಗೆ ಗೌರವಾರ್ಪಣೆ



ಯಾವ ಸಭೆಯಲ್ಲಿ ಅನುಭವಸ್ಥ ಹಿರಿಯರು ಇಲ್ಲವೋ ಅದು ಸಭೆ ಅನ್ನಿಸದು. ಯಾರು ಧರ್ಮವನ್ನು ಉಪದೇಶ ಮಾಡುವುದಿಲ್ಲವೋ ಅವರು ಹಿರಿಯರು ಎನ್ನಿಸಿಕೊಳ್ಳುವುದಿಲ್ಲ. ಈ ಬಗ್ಗೆ ಶ್ಲೋಕವೊಂದು ಹೀಗಿದೆ – ನ ಸಾ ಸಭಾ ಯತ್ರ ನ ಸಂತಿ ವೃದ್ಧಾ: । ನ ತೇ ವೃದ್ಧಾ ಯೇ ನ ವದಂತಿ ಧರ್ಮಮ್ ॥ ಇದರಿಂದ ಹಿರಿಯರ ಮಹತ್ವ ತಿಳಿಯುತ್ತದೆ. ಹಿರಿಯರಿಗೆ ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆಯುವುದು ನಮ್ಮ ಧರ್ಮ. ಆದ್ದರಿಂದ 26–01–2022ರ 73ನೇ ಗಣರಾಜ್ಯೋತ್ಸವ ದಿನದಂದು ನಮ್ಮ ಸಮಾಜದ ಹಿರಿಯರಾದ ಶ್ರೀ ಪಿ.ಜಿ.ರಾವ್ ಇವರನ್ನು ಸನ್ಮಾನಿಸಿ ಗೌರವ ನೀಡುವುದೆಂದು ಸಮಾನ ಮನಸ್ಕರಾದ ನಾವು ಅವರ ಮನೆಗೆ ತೆರಳಿದೆವು. ಶ್ರೀ ಪಿ.ಗುರುರಾಜ ರಾವ್ ಮತ್ತು ಅವರ ಶ್ರೀಮತಿ ಸಂಪತಿಯವರು ನಮ್ಮನ್ನೆಲ್ಲ ಆತ್ಮೀಯತೆಯಿಂದ ಸ್ವಾಗತಿಸಿದರು. ಅವರೊಡನೆ ಕ್ಷೇಮ ಸಮಾಚಾರ ವನ್ನು ವಿನಿಮಯ ಮಾಡಿಕೊಂಡೆವು. ಅವರು ಪ್ರೀತಿಯಿಂದ ನೀಡಿದ ಸತ್ಕಾರವನ್ನು ಸ್ವೀಕರಿಸಿ ದೆವು. ನಾವು ನೀಡುವ ಸನ್ಮಾನ ಮತ್ತು ಗೌರವ ವನ್ನು ಸ್ವೀಕರಿಸಬೇಕೆಂದು ಅವರೊಡನೆ ಕೇಳಿ ಕೊಂಡೆವು. ಹಿರಿಯರಾದ ಶ್ರೀ ಎಂ.ಪಾಲಚಂದ್ರ ರಾಯರು ಶ್ರೀ ಪಿ.ಗುರುರಾಜ ರಾಯರನ್ನು ಸಭೆಗೆ ಪರಿಚಯಿಸಿದರು. ಅವರೊಡನೆ ಇದ್ದ ಒಡನಾಟ, ಅವರ ಸರಳ ಜೀವನ ಶೈಲಿ. ಕೊಡವೂರಿನಲ್ಲಿ ಅವರಿಗೆ ಇದ್ದ ಗೌರವವನ್ನು ವಿವರಿಸುತ್ತ ಅವರಿಗೆ ಅಭನಂದನೆ ಮಾಡುತ್ತ ಅವರು ಮತ್ತು ಕುಟುಂಬದವರಿಗೆ ದೀರ್ಘಾಯುಷ್ಯ, ಉತ್ತಮ ಆರೋಗ್ಯ ಹಾಗೂ ಕೀರ್ತಿ ಮತ್ತು ಸಂಪತ್ತು ದೇವರು ಅನುಗ್ರಹಿಸಲಿ ಎಂದು ಪ್ರಾರ್ಥಿಸಿದರು. ನಾವು ಹಲವು ವರ್ಷಗಳಿಂದ ಸಮಾಜದ ಹಿರಿಯರನ್ನು ಗೌರವಿಸಿ ಸನ್ಮಾನಿಸುವ ಕಾರ್ಯ ಕ್ರಮವನ್ನು ಮಾಡುತ್ತಾ ಬಂದಿದ್ದೇವೆ ಮತ್ತು ಈ ಸಲ ಶ್ರೀ ಪಿ. ಗುರುರಾಜ ರಾವ್ ಅವರನ್ನು ಸನ್ಮಾನಿಸಿ ಅವರ ಆಶೀರ್ವಾದಕ್ಕೆ ಪಾತ್ರರಾಗಿದ್ದೇವೆ ಎಂದು ವಸಂತ ರಾವ್ ಕರಂಬಳ್ಳಿ ಅವರು ಶುಭ ಹಾರೈಸಿ ದರು. ಬಳಿಕ ಹಿರಿಯರನ್ನು ಗೌರವಿಸುವ ಹಾಗೂ ಸನ್ಮಾನಿಸುವ ಹೃದಯ ಸ್ಪರ್ಶಿ ಕಾರ್ಯಕ್ರಮ ಸಂಪನ್ನಗೊಂಡಿತು. ಶ್ರೀ ಪಿ. ಗುರುರಾಜ ರಾವ್ ಅವರ ತಲೆಗೆ 'ಪೇಟಾ' ತೊಡಿಸಿ, ಮಲ್ಲಿಗೆ ಹೂ ಮಾಲೆಯನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನು ನೀಡಿ ನೆನಪಿನ ಕಾಣಿಕೆಯಾಗಿ ದೇವರ ಮೂರ್ತಿಯನ್ನಿತ್ತು ಬಹಳ ಶಿಸ್ತಿನಿಂದ ನಮ್ಮವರು ಗೌರವಿಸಿ ಸನ್ಮಾನಿಸಿದರು. ಅವರ ಪತ್ನಿ ಶ್ರೀಮತಿ ಸಂಪತಿ ಅವರಿಗೆ ಕುಂಕುಮ ಮತ್ತು ಸೀರೆಯ ನ್ನಿತ್ತು ಗೌರವಿಸಿದೆವು. ಎಲ್ಲರೂ ದಂಪತಿಗಳಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದೆವು.

"ನೀವು ನೀಡಿದ ಗೌರವವನ್ನು ಖುಷಿಯಿಂದ ಸ್ವೀಕರಿಸಿದ್ದೇನೆ. ಕೊಡವೂರು ಶ್ರೀ ಶಂಕರ ನಾರಾಯಣ ದೇವರ ದಯೆಯಿಂದ ನಮ್ಮದು ಆದರ್ಶ ಕುಟುಂಬ. ನನ್ನಿಂದ ಆದಷ್ಟು ಉಪಕಾರವನ್ನು ಮಾಡುತ್ತೇನೆ. ಯಾರಿಗಾದರೂ ಉಪಕಾರವನ್ನು ಮಾಡಬೇಕು. ಅಪಕಾರವನ್ನು ಮಾಡಬಾರದು. ಒಳ್ಳೆಯದನ್ನೇ ಮಾಡಬೇಕು. ಒಳ್ಳೆಯದನ್ನೇ ಬಯಸಬೇಕು. ಕೆಟ್ಟದ್ದನ್ನು ಮಾಡಬಾರದು. ಇದು ನನ್ನ ತತ್ವ ಎಂದು ಶ್ರೀ ಪಿ. ಗುರುರಾಜ ರಾಯರು ಸನ್ಮಾನಕ್ಕೆ ಉತ್ತರವಾಗಿ ನುಡಿದರು. ಎಲ್ಲರ ಪರವಾಗಿ ಅವರಿಗೆ, ಅವರ ಮಗ ಮತ್ತು ಸೊಸೆ ಇವರಿಗೂ ಭಾಗವಹಿಸಿದವರೆಲ್ಲರಿಗೂ ವೈ.ಮೋಹನ ರಾವ್ ಕೃತಜ್ಞತೆಯನ್ನು ಸಲ್ಲಿಸಿದರು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★
ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ-ಅರ್ಚಕ ಪರಿಪಾಲನಸಭಾ, ಮಂಗಳೂರು

**–: ಮಾಘ ಮಾಸದ ಕಾರ್ಯಕ್ರಮ :–**

ಶ್ರೀ ಶಿವಪಂಚಾಕ್ಷರಿಮಂತ್ರ ಜಪಯಜ್ಞ.

**ಯಜ್ಞಾನಾಂ ಜಪಯಜ್ಞೋಸ್ಮಿ । ಅಲ್ಪಾರಂಭಃ ಪ್ರಶಸ್ಯತೇ । ಜಪತೋ ನಾಸ್ತಿ ಪಾತಕಮ್ ।**

ಈ ವಚನಗಳ ಉಪದೇಶಾನುಸಾರವಾಗಿ ಈ ಕಾರ್ಯಕ್ರಮ. ಸಭೆಯ ಸಕಲಸದಸ್ಯರು ಭಾಗವಹಿಸಬೇಕು. ಸಮಾಜದ ಸಂಸ್ಥೆಗಳ ಸಹಕಾರ ಪಡೆದು ಸ್ಥಾನಿಕ ಬ್ರಾಹ್ಮಣರೆಲ್ಲ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು.

**ಅವಧಿ : 17/2 ಗುರುವಾರ ಮಾಘಕೃಷ್ಣ ಪಾಡ್ಯದಿಂದ 1/3 ಮಂಗಳವಾರ ಚತುರ್ದಶಿ (ಶಿವರಾತ್ರಿ) ವರೆಗೆ 13 ದಿನ.**

**ಸಮಯ :** ಪ್ರಾತಃ ಅಥವಾ ಸಾಯಂ. ಮುಸ್ಸಂಜೆಯ ಸಮಯ ಒಳ್ಳೆಯದು.

**ಸ್ಥಳ :** ಅವರವರ ವಾಸ್ತವ್ಯ ಸ್ಥಳ. ಪ್ರತಿಯೊಬ್ಬರ ಗುರಿ : ಪ್ರತಿದಿನ 1,000 ಸಂಖ್ಯೆ

**ಉದ್ದೇಶ:** 1. ಶ್ರೀ ಗುರು ಸ್ವರೂಪನಾದ ಪರಮಶಿವನ ಅನುಗ್ರಹವನ್ನು ಸಂಪಾದಿಸಲು.

2. ಮೃತ್ಯುಂಜಯ ಶಿವನ ಕೃಪೆಯಿಂದ ಸಮಾಜದ ಸಕಲ ಬಂಧುಗಳ ರೋಗಭಯ–ಮೃತ್ಯುಭಯಗಳ ನಿವಾರಣೆಗೆ.

**ಜಪಕ್ರಮ :** ಆಚಮನ–ಪ್ರಾಣಾಯಾಮ. ಗುರುಗಣಪತಿಸ್ಮರಣ । ಸಂಕಲ್ಪ – ಮಮೋಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ, ಅಸ್ಮಾಕಂ ಸ್ಥಾನಿಕಬ್ರಾಹ್ಮಣಾನಾಂ ಕ್ಷೇಮಾಭಿವೃದ್ಧ್ಯರ್ಥಂ, ದೇವ–ಗುರು ಸನ್ನಿಧೌ ಶ್ರದ್ಧಾಭಕ್ತಿಸಿದ್ಧ್ಯರ್ಥಂ, ಮೃತ್ಯುಂಜಯಸ್ಯ ಪರಮೇಶ್ವರಸ್ಯ ಅನುಗ್ರಹೇಣ ರೋಗಭಯ–ಮೃತ್ಯುಭಯ ನಿವಾರಣಾರ್ಥಂ **ಶಿವಪಂಚಾಕ್ಷರೀಮಂತ್ರಜಪಂ** ಕರಿಷ್ಯೇ ।

ವಾಮದೇವ ಋಷಿಃ । ಪಂಕ್ತಿಃಛಂದಃ । ಶ್ರೀಸದಾಶಿವರುದ್ರೋ ದೇವತಾ । ಜಪೇ ವಿನಿಯೋಗಃ ॥
ಓಂ ಅಂಗುಷ್ಠಾಭ್ಯಾಂ ನಮಃ । ನಂ ತರ್ಜನೀಭ್ಯಾಂ ನಮಃ । ಮಂ ಮಧ್ಯಮಾಭ್ಯಾಂ ನಮಃ ।
ಶಿಂ ಅನಾಮಿಕಾಭ್ಯಾಂ ನಮಃ । ವಾಂ ಕನಿಷ್ಠಿಕಾಭ್ಯಾಂ ನಮಃ । ಯಃ ಕರತಲಕರಪೃಷ್ಠಾಭ್ಯಾಂ ನಮಃ ॥
ಓಂ ಹೃದಯಾಯ ನಮಃ । ನಂ ಶಿರಸೇ ಸ್ವಾಹಾ । ಮಂ ಶಿಖಾಯೈ ವಷಟ್ । ಶಿಂ ಕವಚಾಯ ಹುಮ್ ।
ವಾಂ ನೇತ್ರತ್ರಯಾಯ ವೌಷಟ್ । ಯಃ ಅಸ್ತ್ರಾಯ ಫಟ್ ॥ ಓಂ ಭೂರ್ಭುವಃಸ್ವರೋಮ್ ಇತಿ **ದಿಗ್ಬಂಧಃ** ॥

**ಧ್ಯಾನಮ್ :**

ಬಿಭ್ರದ್ದೋರ್ಭಿಃ ಕುಠಾರಂ ಮೃಗಮಭಯವರೌ ಸುಪ್ರಸನ್ನೋ ಮಹೇಶಃ
ಸರ್ವಾಲಂಕಾರದೀಪ್ತಃ ಸರಸಿಜನಿಲಯೋ ವ್ಯಾಘ್ರಚರ್ಮಾತ್ತವಾಸಾಃ ।
ಧ್ಯೇಯೋ ಮುಕ್ತಾಪರಾಗಾಮೃತರಸ ಕಲಿತಾದ್ರಿಪ್ರಭಃ ಪಂಚವಕ್ತ್ರಃ
ತ್ರ್ಯಕ್ಷಃ ಕೋಟೀರಕೋಟೀಘಟಿತ ತುಹಿನ ರೋಚಿಷ್ಕಲೋತ್ತುಂಗಮೌಲಿಃ ॥ **ಓಂ ನಮಃ ಶಿವಾಯ** ॥

ಜಪಾಂತ್ಯದಲ್ಲಿ ಅಂಗನ್ಯಾಸ– ಓಂ ಭೂರ್ಭುವಃಸ್ವರೋಮ್ ಇತಿ ದಿಗ್ವಿಮೋಕಃ । ಧ್ಯಾನವನ್ನು ಹೇಳಿ ಅನೇನ ಪಂಚಾಕ್ಷರಿಮಂತ್ರಜಪೇನ ಕರ್ಮಣಾ ಭಗವಾನ್ ಸರ್ವಾತ್ಮಕಃ ಶ್ರೀ ಪರಮೇಶ್ವರಃ ಪ್ರೀಯತಾಮ್ । ಎಂದು ಬ್ರಹ್ಮಾರ್ಪಣ ಮಾಡುವುದು.

**ಸ್ತ್ರೀಯರು** ಕೂಡ ಭಾಗವಹಿಸಬಹುದು. **ಜಪಕ್ರಮ :** ಆಚಮನ–ಪ್ರಾಣಾಯಾಮ. ಗುರುಗಣಪತಿಸ್ಮರಣ । ಸಂಕಲ್ಪ – ಮಮೋಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ, ಅಸ್ಮಾಕಂ ಸ್ಥಾನಿಕಬ್ರಾಹ್ಮಣಾನಾಂ ಕ್ಷೇಮಾಭಿವೃದ್ಧ್ಯರ್ಥಂ, ದೇವ–ಗುರು ಸನ್ನಿಧೌ ಶ್ರದ್ಧಾಭಕ್ತಿಸಿದ್ಧ್ಯರ್ಥಂ, ಮೃತ್ಯುಂಜಯಸ್ಯ ಪರಮೇಶ್ವರಸ್ಯ ಅನುಗ್ರಹೇಣ ರೋಗಭಯ–ಮೃತ್ಯುಭಯ ನಿವಾರಣಾರ್ಥಂ ಶಿವಪಂಚಾಕ್ಷರೀಮಂತ್ರಜಪಂ ಕರಿಷ್ಯೇ ।
ವಾಮದೇವ ಋಷಿಃ । ಪಂಕ್ತಿಃ ಛಂದಃ । ಶ್ರೀಸದಾಶಿವರುದ್ರೋ ದೇವತಾ । ಜಪೇ ವಿನಿಯೋಗಃ ॥

**ಧ್ಯಾನಮ್ :**

ಬಿಭ್ರದ್ದೋರ್ಭಿಃ ಕುಠಾರಂ ... .. ..ತುಹಿನ ರೋಚಿಷ್ಕಲೋತ್ತುಂಗಮೌಲಿಃ ॥ **ನಮಃ ಶಿವಾಯ** ॥
(ನ್ಯಾಸ ಹಾಗೂ ಓಂಕಾರ ಉಚ್ಚಾರಣೆ ಬೇಡ)

ಶಿವರಾತ್ರಿಯ ಪೂಜಾಸಮಯದಲ್ಲಿ ಅವರವರ ಜಪವನ್ನು ಶಿವಾರ್ಪಣ ಮಾಡಬೇಕು. ಸಭೆಯ ಅಧ್ಯಕ್ಷಾದಿ ಪದಾಧಿಕಾರಿಗಳು ಸೂಕ್ತಕ್ರಮದಲ್ಲಿ ಸಂಘಟಿಸಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

**– ವಾಗೀಶ ಎಸ್. ಶಾಸ್ತ್ರೀ**
**ಉಡುಪಿ ಪ್ರಾಂತೀಯ ಧರ್ಮಾಧಿಕಾರಿ, ಶ್ರೀ ಶೃಂಗೇರೀ ಶಾರದಾಪೀಠ.**


Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ. ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೊಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ನಗು ನಿಲ್ಲಿಸಿದ ಪ್ರಫುಲ್ಲಚಂದ್ರ

■...1ನೇ ಪುಟದಿಂದ

ಸೇರುತ್ತಿದ್ದರು. ಅವರ ಪಟ್ಟಾಂಗ, ಹರಟೆ, ಚರ್ಚೆ, ಸಂಘಟನಾ ಕಾರ್ಯಗಳು ಸಂಪನ್ನಗೊಳ್ಳುತ್ತಿದ್ದದ್ದು ಅಲ್ಲೇ. ಅದನ್ನು ಮೌನವಾಗಿ ನೋಡುತ್ತಿದ್ದ ಹುಡುಗನಿಗೆ ಅದು ಜೀವನದ ಭಾಗವಾಗಿಯೇ ಬೆಳೆಯಿತು. ಹಾಗಾಗಿಯೇ ಅವರ ಜೀವನದುದ್ದಕ್ಕೂ ಸ್ಥಾನಿಕ ಬ್ರಾಹ್ಮಣ ಸಂಘದ ನೆನಪು ನಿರಂತರವಾಗಿ ಉಳಿಯಿತು. “‘ಸಂಘ’ ಸಣ್ಣದಾಗಿತ್ತು. ಉಡುಪಿಯೇ ಸಂಘದ ಕೇಂದ್ರ. ಕಾರ್ಯಕ್ರಮ ಮಾಡುವುದಿದ್ದರೆ ಬೇರೆಯವರ ಕಟ್ಟಡ–ಭವನಗಳಲ್ಲಿ. ನಮ್ಮ ಸಂಘ ಎಂಬ ಅಭಿಮಾನವೂ ಬೆಳೆದಿರಲಿಲ್ಲ. ಸ್ಥಾಪಕ ಸದಸ್ಯರ ಮನೆ ಮಂದಿಗೆ ಕಡ್ಡಾಯ ಹಾಜರಾತಿಯ ಅಲಿಖಿತ ಆದೇಶವಿದ್ದ ಕಾರಣ ಮನೆ ಮಂದಿಯೆಲ್ಲಾ ಭಾಗವಹಿಸುವುದು ಅನಿವಾರ್ಯವಾಗಿತ್ತು. ಹಾಗೇ ಪ್ರಫುಲ್ಲಚಂದ್ರ ರಾಯರು ತಮ್ಮ ಅಣ್ಣ–ತಮ್ಮ, ಅಕ್ಕ–ತಂಗಿ, ಅಪ್ಪ–ಅಮ್ಮಂದಿರ ಜತೆ ಖಾಯಂ ಪ್ರತಿನಿಧಿಯಾಗಿದ್ದರು. ಹೀಗಾಗಿ ಸಂಘದ ಆಗು–ಹೋಗುಗಳ ‘ಪರಮ’ ಜ್ಞಾನ ಅವರಿಗಾದದ್ದು. “ಅಂದಿನ ಮತ್ತು ಈಗಿನ ನಮ್ಮ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವನ್ನು ತಕ್ಕಡಿಯ ಎರಡು ತಟ್ಟೆಗಳಲ್ಲಿ ನಿಂತು ತೂಗುತ್ತಿದ್ದರೆ ನಡುವೆ ಒಬ್ಬ ವ್ಯಕ್ತಿ ಹಾದು ಹೋಗುತ್ತಾನೆ. ಸಂಘ–ನಡೆದು ಬಂದ ಹಾದಿಯುದ್ದಕ್ಕೂ ಆ ನಡಿಗೆಗೆ ಸಾಕ್ಷಿಯಾಗಿ ತನ್ನ ‘ಏಳು ಬೀಳು’ಗಳನ್ನು ಲೆಕ್ಕಿಸದೆ ನಡೆದು ಬಂದ ಆ ವ್ಯಕ್ತಿಯೇ ಪ್ರಫುಲ್ಲಚಂದ್ರರಾಯರೆಂದರೆ ತಪ್ಪಾಗುವುದಿಲ್ಲ ಎನಿಸುತ್ತದೆ. ಅಂದಿನ ಶಾರದಾ ಮಂಟಪ ಇಂದಿನ ಶಾರದಾ ಮಂಟಪವಾಗಿ ಬದಲಾದ ನವನಿರ್ಮಾಣ ಪರ್ವವನ್ನು ಅವಲೋಕಿಸಿದರೆ ಅದರಲ್ಲಿ ಕೇಂದ್ರ ಪ್ರಮುಖ ಅಧ್ಯಾಯಗಳು ಗೋಚರಿಸುತ್ತವೆ. “ಸುಮಾರು 1964ರಲ್ಲಿ ನಮ್ಮ ‘ಸಂಘ’ ಆರಂಭವಾಗಿತ್ತು. ಆಗ ನಮಗೊಂದು ಸ್ವಂತ ಕಟ್ಟಡವಿರಲಿಲ್ಲ. ವರ್ಷಕ್ಕೊಮ್ಮೆ ನಡೆಯುತ್ತಿದ್ದ ವಿಜಯದಶಮಿಯ ಕಾರ್ಯಕ್ರಮ ಈಗಿನ ನಮ್ಮ ಶಾರದಾ ಮಂಟಪದ ಸಮೀಪವಿದ್ದ ಪುತ್ತಿಗೆಮಠದ ಸಭಾಭವನದಲ್ಲಿ ನಡೆಯುತ್ತಿತ್ತು. ಒಂದು ವರ್ಷ ಆ ಅವಕಾಶ ನಿರಾಕರಿಸಲ್ಪಟ್ಟಾಗ ಖಿನ್ನರಾಗಿ ಅಸಮಾಧಾನಗೊಂಡ ನಮ್ಮ ಸಂಘದ ರೂವಾರಿಗಳು ಹಠಕ್ಕೆ ಬಿದ್ದು ಸ್ವಂತ ಕಟ್ಟಡದ ವ್ಯೂಹ ನಿರ್ಮಿಸುತ್ತಿದ್ದಾಗ ಅಕಸ್ಮಾತ್ ಎದುರಾದ ಅಲೆವೂರು ಶ್ಯಾಮ ರಾಯರ ದೂರಾಲೋಚನೆ ಮತ್ತು ನೆರವಿನ ಬಲದಿಂದ ಕುಂಜಾರು ದಾಸಪ್ಪಯ್ಯ ಗಾರ್ಡನ್ ನಾಮಧೇಯದ ನಿವೇಶನ ನಮ್ಮದಾಯಿತು. “ಶ್ಯಾಮರಾಯರು ತುಂಬಿದ ಸ್ಫೂರ್ತಿ, ಅಂದಿನ ನಮ್ಮ ಸಮಾಜದ ಹಿರಿಯರ ಛಲಬಿಡದ ದುಡಿಮೆಯ ಫಲದಿಂದ ಉಡುಪಿಯ ನಮ್ಮ ಸಮಾಜದ ಲಾಂಛನವಾಗಿ ಶಾರದಾ ಮಂಟಪವೂ ತಲೆ ಎತ್ತಿತು. ಅಂದಿನಿಂದ ನಮ್ಮ ಸಮಾಜದ ಸಂಘಟನೆ ಮತ್ತು ಸಂಘರ್ಷ ವೇಗ ಪಡೆಯಿತು. ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾಗಿದ್ದ ಶ್ರೀಮದಭಿನವ ವಿದ್ಯಾತೀರ್ಥರು ನಮ್ಮ ಸಮಾಜವನ್ನು ಹರಸಿದ್ದರು. “ಚಿಕ್ಕದಾಗಿ, ಚೊಕ್ಕವಾಗಿದ್ದು ಆಯಕಟ್ಟಿನ ಸ್ಥಳದಲ್ಲಿದ್ದ ಶಾರದಾ ಮಂಟಪ, ವಿವಾಹ ಸಭಾಭವನವಾಗಿ ರೂಪುಗೊಂಡು ಗ್ರಾಹಕರನ್ನು ಸೆಳೆದು ಬೆಳೆಯಿತು. “ವರ್ಷ 1988ರಲ್ಲಿ ಶಾರದಾ ಮಂದಿರದ ನಿರ್ಮಾಣವೂ ಆಗಿ ಶ್ರೀಮದಭಿನವ ವಿದ್ಯಾತೀರ್ಥ ಸ್ವಾಮಿಗಳು ಮತ್ತು ತತ್ಕರಕಮಲ ಸಂಜಾತರಾದ ಶ್ರೀ ಭಾರತೀತೀರ್ಥ ಸ್ವಾಮಿಗಳ ದಿವ್ಯ ಹಸ್ತದಿಂದ ಶ್ರೀ ಗಣಪತಿ, ಶ್ರೀ ಶಾರದಾಮಾತೆ ಮತ್ತು ಜಗದ್ಗುರು ಶಂಕರಾಚಾರ್ಯರ ಪ್ರತಿಷ್ಠಾಪನೆಯೂ ಸಂಪನ್ನಗೊಂಡಿತು. “ಈ ಎಲ್ಲಾ ಆಗು ಹೋಗುಗಳ ಮಧ್ಯೆ ಚಟುವಟಿಕೆಯಿಂದ ಪಾಲ್ಗೊಂಡು ತನ್ನ ಶಕ್ತ್ಯಾನುಸಾರ ಮೂಗು ತೂರಿಸುತ್ತಾ ಬೆಳೆಯುತ್ತಿದ್ದ ಪ್ರಫುಲ್ಲಚಂದ್ರನಿಗೆ ನಮ್ಮ ಸಮಾಜ ಬಾಂಧವರ, ಅದರಲ್ಲೂ ಮುಖ್ಯವಾಗಿ ಅಂದಿನ ನಮ್ಮ ಸಮಾಜ ನಾಯಕರ ನಿಕಟ ಒಡನಾಟದ ಲಾಭವೂ ಸಿಕ್ಕಿತ್ತು. ಹೀಗೆ ಸಾಗುತ್ತಿದ್ದಾಗ ಅವರ ಅಣ್ಣ ಚಂದ್ರಶೇಖರರಾಯರು ಕ್ರಿಯಾಶೀಲರಾಗಿ ಯುವಕರ ತಂಡವೊಂದನ್ನು ಕಟ್ಟುವ ಪ್ರಯತ್ನ ಆರಂಭಿಸಿದ್ದರು. ಅವರು ಬ್ಯಾಂಕ್ ಉದ್ಯೋಗಿಯಾಗಿದ್ದ ಕಾರಣ ಅವರ ಪ್ರಯತ್ನ ಅವರ ಸುತ್ತ ಮುತ್ತಲಿನ ಬ್ಯಾಂಕ್ ಉದ್ಯೋಗಿಗಳನ್ನಷ್ಟೇ ಮುಟ್ಟಲು ಸಾಧ್ಯವಾಗಿತ್ತು. “ಸುಮಾರು 1989ರಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ 2ನೇ ಜನಾಂಗದ ಪ್ರವೇಶ ಪ್ರಕ್ರಿಯೆ ಆರಂಭವಾಗಿತ್ತು. ಆಡಳಿತ ಮಂಡಳಿಯಲ್ಲೂ ಮೊದಲ ಪೀಳಿಗೆಯ ನಾಯಕರು ಜವಾಬ್ದಾರಿಗಳನ್ನು ಹೊಸಬರಿಗೆ ವಹಿಸಿ ಕೊಡಲು ಆರಂಭಿಸಿದ್ದರು. ಹೆಚ್ಚುಗಾರಿಕೆಯೆಂದರೆ ಈ 2ನೇ ಪೀಳಿಗೆಯ ನಾಯಕರನ್ನೆಲ್ಲ ಪ್ರಫುಲ್ಲಚಂದ್ರರಾಯರೇ ಪರಿಚಯಿಸಿದ್ದರು. ದುರ್ಬೀನು ಹಿಡಿದು ಸಮರ್ಥರನ್ನು ಸ್ಕ್ರೀನ್ ಮಾಡುವ ಕುಶಲತೆಯು ಅವರಲ್ಲಿತ್ತು. ಈ ದಾರಿಯಲ್ಲಿ ಅವರು ಹಲವಾರು ಆಂತರಿಕ ವೈಮನಸ್ಸುಗಳಿಗೂ ಕಾರಣರಾಗಿದ್ದರು ಎನ್ನಬಹುದು. “ಯಾವುದೋ ಒಂದು ಪದವಿಗೆ ಅಂಟಿಕೊಂಡು ಕೂಡಿಸಿ–ಕಳೆಯುವ ಕೆಲಸ ಮಾಡುವವರಿಂದ ಹೆಚ್ಚೇನನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂಬ ಚಿಂತನೆಗೆ ಬದ್ಧರಾಗಿ, ಹೊಸಸ್ಫೂರ್ತಿಯೊಂದು ಮುನ್ನುಗ್ಗುವ ಯುವಕರ ತಂಡವೊಂದನ್ನು ಸಂಘಟಿಸುವ ಕೆಲಸ ಮಾಡಿದರು. ಬೇರೆ ಬೇರೆ ವೃತ್ತಿಯಲ್ಲಿದ್ದ ನಮ್ಮ ಸಮಾಜದ ಯುವಕರನ್ನು ಹಾಗೂ ಮಹಿಳೆಯರನ್ನು ಸಂಘಟಿಸಿ ವಿದ್ಯುಕ್ತವಾಗಿ ಯುವ ವಿಭಾಗ ಮತ್ತು ಮಹಿಳಾ ವಿಭಾಗಗಳನ್ನು ಆರಂಭಿಸಿದರು. ಯುವ ವಿಭಾಗದ ಚಟುವಟಿಕೆಗಳು ಹೆಚ್ಚಾಗುತ್ತಿದ್ದಂತೆ ಸಂಘವೂ ಬಲವಾಗತೊಡಗಿತು. ಈ ಮಧ್ಯೆ ಯುವ ವಿಭಾಗದ ಶಾಖೆಗಳನ್ನು ಸುತ್ತಮುತ್ತಲಿನ ಊರುಗಳಲ್ಲಿ ಆರಂಭಿಸುವ ಪ್ರಯತ್ನವೂ ನಡೆದಿತ್ತು. ಇದಕ್ಕೆಲ್ಲಾ ಪ್ರಫುಲ್ಲಚಂದ್ರರೇ ದೀಪದಾರಿಯಾಗಿದ್ದರು. ಅವರ ನಾಯಕತ್ವದ ಇನ್ನೊಂದು ಲಕ್ಷಣವೆಂದರೆ ಅಧಿಕಾರ ವಿಕೇಂದ್ರೀಕರಣ ತತ್ವ. ಯಾವುದೇ ಪದವಿಯನ್ನು ಅವರು ಸ್ವೀಕರಿಸುತ್ತಿರಲಿಲ್ಲ. ತಾವು ಎಲ್ಲರಲ್ಲಿ ಒಬ್ಬನಾಗಿ ನಡೆದು ಬರುತ್ತಿದ್ದರು. ಅವರ ಲಕ್ಷ್ಯ ಮತ್ತೊಂದು ಗುರಿ ಎಡೆಗೆ ಕೇಂದ್ರೀಕೃತವಾಗುತ್ತಿತ್ತು. “ನಮ್ಮದೇ ಒಂದು ಕೋ–ಆಪರೇಟಿವ್ ಬ್ಯಾಂಕ್ ಆರಂಭಿಸುವುದು ಅವರ ಮತ್ತೊಂದು ಕನಸಾಗಿತ್ತು. ಅದಕ್ಕಾಗಿ ಮಾಡಿದ 2–3 ಪ್ರಯತ್ನಗಳು ವಿಫಲವಾದರೂ ಛಲ ಬಿಡಲಿಲ್ಲ. ಅವರ ಆಶಯಕ್ಕೆ ಬಲಕೊಡುವ ಕೆಲವರು ಹಿರಿಯರು ‘ಸೈ’ ಎಂದಾಗ ತನ್ನ ಜೊತೆಗಿದ್ದವರನ್ನು ಸೇರಿಸಿಕೊಂಡು ಪ್ರವರ್ತಕ ಮಂಡಳಿಯೊಂದನ್ನು ರಚಿಸಿದರು. ಆಗಲೂ ನಿರಾಸಕರ ವಿರೋಧ ವ್ಯಕ್ತವಾಗಿತ್ತು. ಹೆಜ್ಜೆ ಹಿಂದಿಡದೆ ನಮ್ಮ ಸಮಾಜ ಬಾಂಧವರನ್ನು ಸದಸ್ಯತನಕ್ಕೆ ಪ್ರೇರೇಪಿಸಿ ಪಾಲು ಬಂಡವಾಳ ಸಂಗ್ರಹಿಸಲಾಯಿತು. “ಇದರ ಮಧ್ಯೆ ವಿಧಿಯೊಡ್ಡಿದ ತಡೆ ಎಂಬಂತೆ ಅವರು ವ್ಯಾಪಾರ ನಡೆಸುತ್ತಿದ್ದ ಅಂಗಡಿಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ತಗಲಿ ಆಘಾತ ಅನುಭವಿಸಿದರು. ಜೊತೆಗಿದ್ದವರು ಧೈರ್ಯ ತುಂಬಿದರು. ಪ್ರವರ್ತಕ ಮಂಡಳಿಯ ಸದಸ್ಯರು ಹೆಚ್ಚು ಧೈರ್ಯ ತುಂಬಿ ಮುನ್ನಡೆಸಿದರು. ಪ್ರಫುಲ್ಲಚಂದ್ರರಾಯರು ಇಟ್ಟ ಹೆಜ್ಜೆ ಹಿಂದಿಡದೆ ಮುನ್ನಡೆದರು. ಅದು ಉಳಿದವರಿಗೆ ಹೆಚ್ಚಿನ ಪ್ರೇರಣೆ ಮತ್ತು ಆತ್ಮಬಲ ನೀಡಿತು. ಶೋಧ–ಪ್ರತಿಶೋಧಗಳ ನಡುವೆ ಆರಂಭಿಸಿದ ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಇಂದು 35 ಕೋಟಿಗೂ ಮಿಕ್ಕಿದ ವ್ಯವಹಾರ ನಡೆಸುತ್ತಿದೆ. ಸತತ ಹದಿನೆಂಟು ವರ್ಷಗಳಿಂದ ನಿವ್ವಳ ಲಾಭಗಳಿಸಿ ಗ್ರಾಹಕ/ಸದಸ್ಯರ ವಿಶ್ವಾಸಗಳಿಸಿದೆ. “ವರ್ಷ 2003 ರಲ್ಲಿ ಶಾರದಾ ಮಂದಿರದ ಜೀರ್ಣೋದ್ಧಾರದ ಸಂಕಲ್ಪದಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಂಡು ಕಟ್ಟಡದ ಒಳಾಂಗಣದ ವಿಸ್ತರಣೆ, ಧನಸಂಗ್ರಹ, ಸಮಾಜಬಾಂಧವರ ಸಂಘಟನೆಯ ಬಹುಮುಖೀ ಯೋಜನೆಗೆ ಬೆಂಬಲವಾಗಿ ನಿಂತರು. ಅವರು ಬಹುವಾಗಿ ನಂಬಿ ಪ್ರೀತಿಸಿದ್ದ ಹೋಂಡಾ ಆಕ್ಟಿವಾ ವಾಹನದಲ್ಲಿ ಅವರೊಂದಿಗೆ ನಾನು ಶೃಂಗೇರಿ, ಭಟ್ಕಳ್, ಮಲ್ಪೆ ಹಾಗೂ ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳ ದೇವಾಲಯಗಳಿಗೆ ವಿನ್ಯಾಸ–ವೀಕ್ಷಣೆಗಾಗಿ ಹೋಗಿದ್ದೆ. ಆಗ ಅದು ಅವರ ಆಪ್ತ ವಾಹನವಾಗಿತ್ತು.“ಆಗಿನಿಂದಲೇ ಅವರಿಗೆ ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಮೇಲೆ ಅನನ್ಯವಾದ ನಂಬಿಕೆ ಆರಂಭವಾಗಿತ್ತು. ಅದು ಮುಂದಿನ ದಿನಗಳಲ್ಲಿ ಅವಿರತವಾಗಿ ಬೆಳೆದಿತ್ತು. ಮುಂದಿನ ದಿನಗಳಲ್ಲಿ ಮಹಾಸನ್ನಿಧಾನಂಗಳವರ ಕರಕಮಲ ಸಂಜಾತ ವಿಧುಶೇಖರ ಭಾರತೀ ಸ್ವಾಮಿಗಳ ಅನುಗ್ರಹಕ್ಕೂ ಪಾತ್ರರಾದರು. ಉಡುಪಿ ಪ್ರದೇಶಕ್ಕೆ ಧರ್ಮಾಧಿಕಾರಿಗಳಾಗಿ ಶ್ರೀ ವಾಗೀಶ ಶಾಸ್ತ್ರಿಗಳನ್ನು ಶ್ರೀಗಳು ನಿಯೋಜಿಸುವಲ್ಲಿಯೂ ಇವರ ಪ್ರಯತ್ನವಿತ್ತು ಎಂಬ ಮಾತಿದೆ. ಶೃಂಗೇರಿ ಪೀಠದ ಜೊತೆಗೆ ಅದ್ವೈತ ತತ್ವ ಶಾಖಾ ಮಠಗಳ ಯತಿಗಳ ಸಂಪರ್ಕವನ್ನು ಪ್ರಫುಲ್ಲಚಂದ್ರರಾಯರು ಹೊಂದಿದ್ದರು. ಮಠಗಳಿಗೆ ಗೌರವ ಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. “ಉಡುಪಿ ಮತ್ತು ಆಸುಪಾಸಿನ ಶೃಂಗೇರಿ ಮಠದ ಶಿಷ್ಯವರ್ಗವನ್ನು ಸಂಘಟಿಸುವಲ್ಲಿಯೂ ಅವರ ಆಸಕ್ತಿ ಉಲ್ಲೇಖನೀಯವಾಗಿತ್ತು. ಹವ್ಯಕ ಬಂಧುಗಳನ್ನು ಜೊತೆಗೂಡಿಸಿಕೊಂಡು ‘ಜ್ಞಾನ ಭಾರತಿ’ ಎಂಬ ವೇದಾಂತ ಪ್ರಸಾರ ವೇದಿಕೆಯನ್ನು ಆರಂಭಿಸಿ ಶಂಕರ ಜಯಂತಿ ಕಾರ್ಯಕ್ರಮ ಹಾಗೂ ಅದ್ವೈತ ತತ್ವ ಉಪನ್ಯಾಸವನ್ನು ಏರ್ಪಡಿಸಲು ಶ್ರಮಿಸಿದ್ದರು. ಉಡುಪಿ ಜಿಲ್ಲಾ ಮಟ್ಟದಲ್ಲಿ ಶಂಕರ ತತ್ವ ಅನುಷ್ಠಾನ ಪ್ರಸಾರ ವೇದಿಕೆಯ ಸಂಚಾಲಕರಾಗಿ ಈಗಿನವರೆಗೂ ಕ್ರಿಯಾಶೀಲರಾಗಿದ್ದರು. ಸೌಂದರ್ಯ ಲಹರಿ ಸಪ್ತಾಹದ ಯಶಸ್ವಿಯಲ್ಲಿಯೂ ಕೈ ಜೋಡಿಸಿದ್ದರು.“ಈ ಬಹುಮುಖ ಚಟುವಟಿಕೆಯ ಜೊತೆಯೇ ತಾನು ಆಸಕ್ತಿಯಿಂದ ವೃತ್ತಿಯಾಗಿ ಹಮ್ಮಿಕೊಂಡ ಭಾರತ್ ಕನ್ಸ್ಟ್ರಕ್ಷನ್ ಕಂಪೆನಿಯನ್ನು ಬೆಳೆಸಿ ಮುನ್ನಡೆಸಿದರು. ಉಡುಪಿಯಲ್ಲಿ ಪ್ರತಿಷ್ಠಿತ ನಿರ್ಮಾಣ ಸಂಸ್ಥೆಯಾಗಿ ಬೆಳೆದ ಸಂಸ್ಥೆ ಹಲವಾರು ವ್ಯವಹಾರ ಸಂಕೀರ್ಣಗಳು ಹಾಗೂ ವಸತಿ ಸಮುಚ್ಚಯಗಳನ್ನು ನಿರ್ಮಿಸಿ ಹೆಸರುಗಳಿಸಿತು. ಅವರನ್ನು ಸಣ್ಣ ಪುಟ್ಟ ಅಭಿಪ್ರಾಯ ಭೇದಗಳಿಂದ ಓರೆಗಣ್ಣಿಂದ ನೋಡುತ್ತಿದ್ದವರೂ ಅವರ ನಿರ್ಮಾಣದ ಗುಣಮಟ್ಟವನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳುತ್ತಿದ್ದರು.“ಅವರ ಬಗ್ಗೆ ಸರಿಯಾಗಿ ತಿಳಿಯದ ಎಷ್ಟೋ ಜನ ಅವರನ್ನು ಒಬ್ಬ ಪರಿಣಿತ ಇಂಜಿನಿಯರ್ ಎಂದು ಭಾವಿಸಿದ್ದರು. ಹಾಗಿತ್ತು ಅವರ ನಿರ್ಮಾಣ ಕೌಶಲ. ಇಷ್ಟಾಗಿ ಅವರು ಕಲಿತದ್ದು ವಾಣಿಜ್ಯ ಶಾಸ್ತ್ರ. ತಂದೆಯಿಂದ ಬಂದ ಭಾರತ್ ಸೈಕಲ್ ಸಂಸ್ಥೆಯನ್ನು ನಡೆಸುತ್ತಾ ಜೊತೆಗೆ ಟೂರಿಸ್ಟ್ ಟ್ಯಾಕ್ಸಿಗಳು, ‘ಭಾರತ್ ಸ್ಟೋರ್ಸ್’ ಸಿದ್ಧ ವಸ್ತುಗಳ ಮಳಿಗೆಗಳನ್ನು ಜೀವನಾಧಾರವಾಗಿ ಮುನ್ನಡೆಸುತ್ತಾ ಜೊತೆಗೆ ಕನ್ಸ್ಟ್ರಕ್ಷನ್ ಕಂಪೆನಿಯ ಕನಸನ್ನು ಕಾಣುತ್ತಿದ್ದರು. “ಇಂತಹದೇ ಒಂದು ಸನ್ನಿವೇಶ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮುಖವಾಣಿ “ಶ್ರೀ ಶಾರದಾ” ಪತ್ರಿಕೆಯ ಉಗಮಕ್ಕೂ ಕಾರಣವಾಯಿತು. ಸಂಘದ ಸಮಾರಂಭ ಒಂದಕ್ಕೆ ಸಮಾಜದ ಹಿರಿಯ ಧಾರ್ಮಿಕ ನಾಯಕ ಪಾವಂಜೆ ಹಳೆಯಂಗಡಿ ಸುಬ್ರಾಯ ಭಟ್ (ಅಪ್ಪಿ ಅಣ್ಣ) ಆಗಮಿಸಿದ್ದರು. ನಾವು ಅದುವರೆಗೆ ನಮ್ಮ ಸಂಘದ್ದೆಂದು ಭಾವಿಸಿದ್ದ ಪತ್ರಿಕೆಯಲ್ಲಿ ಆ ಸುದ್ದಿಯನ್ನು ಪ್ರಕಟಿಸಲು ಶಾಶ್ವತವಾಗಿ ನಿರಾಕರಿಸಲಾಯಿತು. ಬೇಕಾದರೆ ನಿಮ್ಮದೇ ಪತ್ರಿಕೆಯನ್ನು ಮಾಡಿಕೊಳ್ಳಿ ಎಂದಾಗಲೇ ಅದು ನಮ್ಮದಲ್ಲ ಎಂದು ತಿಳಿದದ್ದು. “ಉತ್ಸಾಹ ಯುವಕರ ಬಳಗ ಎದ್ದು ನಿಂತಿತು. ಅಂಬಲಪಾಡಿ ಕೃಷ್ಣರಾಯರ ಆಶೀರ್ವಾದದೊಂದಿಗೆ ಸಿದ್ಧತೆ ಆರಂಭವಾಯಿತು. ಪತ್ರಿಕೆ ಮಾಡುವ ಕಷ್ಟ, ದೊಡ್ಡ ಜವಬ್ದಾರಿಯ ಬಗ್ಗೆ ಅವರು ಸೂಕ್ತ ಎಚ್ಚರಿಕೆಯನ್ನು ನೀಡಿದ್ದರು. ಪ್ರಫುಲ್ಲಚಂದ್ರರಾಯರು ಸಮರೋಪಾದಿಯಲ್ಲಿ ಕೆಲಸ ಮಾಡಿ ಮುಂದಿನ ತಿಂಗಳೊಳಗಾಗಿ ‘ಶ್ರೀ ಶಾರದಾ ಪತ್ರಿಕೆ’ ಯ ಮೊದಲ ಪ್ರತಿ ಅಂಬಲಪಾಡಿ ಕೃಷ್ಣರಾಯರ ದಿವ್ಯ ಹಸ್ತದಿಂದ ಬಿಡುಗಡೆಯಾಯಿತು. ಆಗಲೂ ಕೆಲವರು ನಕ್ಕು ಲೇವಡಿ ಮಾಡಿದರು. ಸೊಸೈಟಿಗೆ ಪಾಲು ಬಂಡವಾಳ ಸಂಗ್ರಹಿಸುವಾಗ ಹಣ ಹಿಡಿದುಕೊಂಡು ಓಡಿ ಹೋಗುತ್ತಾರೆ ಎಂದವರು ಪತ್ರಿಕೆ ನಡೆಯುವುದು ಎರಡೇ ತಿಂಗಳು ಎಂದರು. ಈ ಮಾತುಗಳೇ ಯುವಕರ ಬಳಗದ ತಳಪಾಯಕ್ಕೆ ಗಟ್ಟಿ ಸಿಮೆಂಟ್ ಆಗಿ ಬಲ ನೀಡಿತು. ಈಗ ಪತ್ರಿಕೆ ಹೇಗಿದೆ ಎಂಬುದು ಓದುಗರೆಲ್ಲರಿಗೂ ಮನವರಿಕೆಯಾಗಿದೆ. “ಈ ನಡುವೆ ಅವರ ವಿವಾಹ ಅಡೂರು ಶ್ರೀಧರರಾಯರ ಮಗಳು ಪೂರ್ಣಿಮಾ ಅವರೊಂದಿಗೆ ಸಂಪನ್ನವಾಯಿತು. ಪರಸ್ಪರ ಸೌಹಾರ್ದತೆಯ ಬದುಕು ಅವರಿಬ್ಬರದು. ಅವರ ಬದುಕಿನ ಏಳು ಬೀಳುಗಳೆಲ್ಲದರಲ್ಲೂ ಸಮರಸದಿಂದ ನಡೆದು ಬಂದ ಪೂರ್ಣಿಮಾ ರಾವ್ ಸುತ್ತಮುತ್ತಲಿನವರಿಗೆ ಪೂರ್ಣಿಮಕ್ಕನಾಗಿ ಬೆಳೆದರು. ಬಂಧು ಬಳಗದವರಿಗೆಲ್ಲಾ ಅಚ್ಚುಮೆಚ್ಚಿನವರಾಗಿ ಬೆರೆತರು. ಅವರ ಸುಖ ದಾಂಪತ್ಯದ ಫಲವಾಗಿ ಜನಿಸಿದ ಮಗ ಪ್ರತೀಕ್. ಅವರ ಆಸೆಯಂತೆ ಇಂಜಿನಿಯರ್ ಪದವಿಗಳಿಸಿದನು. ಸೊಸೆಯೂ ಇಂಜಿನಿಯರ್. ಅವರ ಮುದ್ದಿನ ಮೊಮ್ಮಗ ಶ್ರೀವಾಂಶ್ ಈ ಗುಬ್ಬಚ್ಚಿ ಗೂಡಿನ ದೊಡ್ಡ ಹಕ್ಕಿ ಹಾರಿ ಹೋಯಿತು. ತುಂಬು ಸಂಸಾರದ ಎಲ್ಲರಿಗೆ ಪರಮಾತ್ಮನು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಒಂದು ಸಣ್ಣ ನುಡಿನಮನವನ್ನು ಸಲ್ಲಿಸುತ್ತೇನೆ. ಅವರ ಕನಸುಗಳನ್ನು ಸಾಕಾರಗೊಳಿಸುವ ದಾರಿಯಲ್ಲಿ ಮುನ್ನಡೆಯುವ ಶಕ್ತಿಯನ್ನು ಗುರುಗಳು ಮತ್ತು ಶಾರದೆ ಅನುಗ್ರಹಿಸಲಿ ಎಂದು ಸಮಾಜ ಬಾಂಧವರೊಂದಿಗೆ ನನ್ನ ದನಿಗೂಡಿಸುತ್ತೇನೆ. “ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿ ಸದಸ್ಯನಾಗಿ, ಮುಂದೆ ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷನಾಗಿ ಅವರು ಸಲ್ಲಿಸಿದ ಸೇವೆ, ಸಂಘದ ಅಲಿಖಿತ ದಾಖಲೆಯಾಗಿ, ಸ್ವಲ್ಪ ಮಟ್ಟಿನ ಜನಪದ ‘ಲೇಖ’ವಾಗಿಯಾದರೂ ಉಳಿಯುತ್ತದೆ. ಆಡಳಿತ ಮಂಡಳಿಯ ಸಲಹೆಗಾರನಾಗಿಯೂ ಇವರ ಕೊಡುಗೆ ಗಮನಾರ್ಹ. ಸ್ಥಾನಿಕ ಬ್ರಾಹ್ಮಣ ಸಂಘದ ಉಭಯ ಜಿಲ್ಲೆಗಳ ಸಂಘಟನೆಗಳಲ್ಲೂ ನಿಕಟ ಬಾಂಧವ್ಯ ಇರಿಸಿಕೊಂಡಿದ್ದ ಅವರು ಅನೇಕ ಸತ್ಕಾರ್ಯಗಳಿಗೆ ಕೊಡುಗೈ ದಾನಿಯಾಗಿದ್ದರು. ಸಮಾಜ ಬಾಂಧವರ ಸಂಕಷ್ಟಗಳಿಗೆ ನಿರ್ಭೀಡೆಯಿಂದ ಸ್ಪಂದಿಸುತ್ತಿದ್ದ ಅವರ ತೆರೆಮರೆಯ ನೆರವುಗಳು ಅಭಿನಂದನೀಯ. ಎಷ್ಟೋ ಮಂದಿ ಸ್ನೇಹಿತರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಸೇರಿಸಿ, ಬಿಡುಗಡೆಯಾಗಿ ಬಂದಾಗ ಮನೆ ಮಂದಿಗೆ ಉಡುಪಿಯ ವುಡ್‌ಲ್ಯಾಂಡ್ಸ್, ರಾಮಭವನ, ಉಪಹಾರ ಮಂದಿರಗಳಿಂದ ಬಿಸಿ ಬಿಸಿ ಉಪಹಾರವನ್ನು ಮುಂಜಾನೆಯೇ ಹೊತ್ತೊಯ್ಯುತ್ತಿದ್ದ ಅವರ ಸೇವಾಭಾವವನ್ನು ಈ ಹೋಟೆಲ್ ಮಂದಿಯೇ ಹೇಳುತ್ತಾರೆ. ಅದು ನನ್ನ ಅನುಭವವೂ ಹೌದು. ಇದು ಎಲ್ಲಿಯೂ ಬೆಳಕಿಗೆ ಬರದ ನಿಸ್ವ ಸೇವೆ ಎಂಬುದು ಗಮನಾರ್ಹ. “ನಮ್ಮ ಸಮಾಜದ, ಇನ್ನೂ ಬೆಳಕಿನ ಕಿರಣಗಳನ್ನು ಕಾಣದ ಬಡವರ್ಗಕ್ಕೆ, ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ನೆರವಾಗುವ ಜೊತೆಗೆ ಸಂಘದ ಮೂಲಕವೂ ಅವರಿಗೆ ನೆರವಾಗುವ ಪ್ರಯತ್ನ ಅವರದಾಗಿತ್ತು. ನೇರ ನಡೆನುಡಿ ಅನುಚಿತ ಒಪ್ಪಂದಗಳಿಗೆ ಒಪ್ಪದ ಅವರು ಎಷ್ಟೋ ಮಂದಿಯ ನಿಷ್ಠುರಕ್ಕೂ ಒಳಗಾಗಿದ್ದರು. “ಹೀಗೆ ಯೋಜನೆಯ ಸರಪಣಿ ಸಾಗುತ್ತಿದ್ದಂತೆ ಅಗ್ನಿಯ ಜ್ವಾಲೆಗಳೇ ಮೇಲು ಮೇಲಕ್ಕೇರಿ ಪೊಲ್ಲಣ್ಣನ ಪಾರ್ಥಿವ ಶರೀರ ಪಂಚಭೂತಗಳಲ್ಲಿ ಲೀನವಾಗಿತ್ತು.

ಲೇಖನ : ಕೆ.ವೇಣುಗೋಪಾಲ ರಾವ್

## ಮಾರ್ಪಳ್ಳಿ ಮೂಲ ನಾಗ ದೇವರ ದರ್ಶನ ಸೇವೆ ಮತ್ತು ದೈವ ದೇವರುಗಳ ಸಿರಿ ಸಿಂಗಾರ ಸೇವೆ

"ಅನಾದಿ ಕಾಲದಿಂದ ಮಾರ್ಪಳ್ಳಿ ನಾಗಪ್ಪಯ್ಯ ವಂಶಜರು ಆರಾಧಿಸಿ ಬಂದಿದ್ದ ನಮ್ಮ ಮೂಲ ನಾಗ ದೇವರ ಮತ್ತು ಕುಟುಂಬದ ದೈವ ದೇವರ ಪ್ರತಿಷ್ಠಾಪನೆ ಕಾರ್ಯಕ್ರಮ ಗಳು ಕಳೆದ ಸಲ ತಾರೀಕು 01.05.2021 ಮತ್ತು 02.05.2021 ರಂದು ಅನುಕ್ರಮವಾಗಿ ನೆಡೆದಿದ್ದವು ಹಾಗೆಯೇ ಈ ಸಮಯ ದಲ್ಲಿ ಕಾರಣಾಂತರದಿಂದ (ಕೊವಿಡ್–19 ರ ನಿಯಮ) ನಾಗ ದರ್ಶನ ಮತ್ತು ಸಿರಿ ಸಿಂಗಾರ ಸೇವೆ ನಮ್ಮ ಸಂಕಲ್ಪದಂತೆ ನಡೆಸಲು ಅಸಾಧ್ಯವಾಯಿತು. "ನಮ್ಮ ಮೂಲ ಸಂಕಲ್ಪದ ಪ್ರಕಾರ ತಾರೀಕು 15.01.2022ರಂದು ಶನಿವಾರ, ಬ್ರಹ್ಮ ಶ್ರೀ ವೇ. ಮೂ. ಗುರುಪ್ರಸಾದ ಹೆಬ್ಬಾರ್ ಇವರ ನೇತ್ರತ್ವದಲ್ಲಿ ಪ್ರಾತಃ 8.00 ಗಂಟೆಯಿಂದ ಕುಟುಂಬಿಕರ ಉಪಸ್ಥಿತಿಯಲ್ಲಿ ವೈದಿಕ ಕ್ರಿಯೆಗಳು ಪ್ರಾರಂಭಗೊಂಡು ನಾಗಪಾತ್ರಿ ಶ್ರೀ ಕೆ. ಶಂಕರ ನಾರಾಯಣ ಹೆಬ್ಬಾರ್ ಮೂಲಕ ನಾಗದೇವರಿಗೆ ದರ್ಶನ ಸೇವೆಯನ್ನು ಸಲ್ಲಿಸಿ ಶ್ರೀ ಗಂಧಪ್ರಸಾದವನ್ನು ಕುಟುಂಬಿಕರ ಪರವಾಗಿ ನಮ್ಮ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವರವರು ಸ್ವೀಕರಿಸಿದರು. ನಂತರ ಅನ್ನಸಂತರ್ಪಣೆ ನಡೆಯಿತು. ನಮ್ಮ ಪೂರ್ವನಿಗದಿಯಂತೆ ಸಾಯಂಕಾಲ ದೈವಾರಾಧನೆಯ ಕಟ್ಟುಕಟ್ಲೆಯಂತೆ ದೈವ ದೇವರ ಭಂಡಾರವನ್ನು ಗುಡಿಯಿಂದ ಕೋಲದ ಚಪ್ಪರ (ಕೊಡ್ಯಡಿ)ದಲ್ಲಿ ಸ್ಥಾಪಿಸಿ ರಾತ್ರಿ ಅನ್ನ ಸಂತರ್ಪಣೆ ನಡೆಯಿತು. ಸರಿ ಸುಮಾರು ರಾತ್ರಿ 9.30 ಗಂಟೆಗೆ ಪ್ರಾರಂಭವಾದ ಕೋಲವು ಬೆಳಿಗ್ಗೆ 6.00 ಗಂಟೆಯುವರೆಗೆ ನಡೆದು ಮಹಾ ಪ್ರಸಾದವನ್ನು ಕುಟುಂಬದ ಪರವಾಗಿ ನಮ್ಮ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಂ.ಆರ್. ವಾಸುದೇವರವರು ಸ್ವೀಕರಿಸಿ, ಪುನಃ ದೈವದೇವರ ಭಂಡಾರವನ್ನು ಗುಡಿಯಲ್ಲಿಟ್ಟು ಪುಣ್ಯಾಹ–ಪಂಚಗವ್ಯದೊಂದಿಗೆ ಶುದ್ಧೀಕರಣಗೊಳಿಸಿ ಪನಿವಾರ ಸೇವೆಯೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಎಲ್ಲಾ ದೇವತಾ ಕಾರ್ಯಕ್ರಮಗಳು ಕುಟುಂಬದ ಸದಸ್ಯ ಹಾಗೂ ಸಮಾಜ ಬಾಂಧವರು ನೀಡಿದ ಸಹಕಾರದೊಂದಿಗೆ ನಡೆಯಿತು.

**–ಎಂ.ಲಕ್ಷ್ಮೀನಾರಾಯಣ ರಾವ್, ಕಾರ್ಯದರ್ಶಿ, ಮಾರ್ಪಳ್ಳಿ ನಾಗಪ್ಪಯ್ಯ ಟ್ರಸ್ಟ್, ಮಾರ್ಪಳ್ಳಿ.**

## ಅಡಿಗೆಯಲ್ಲಿ ಜೀವನಸಾರ–2

**–ವಿ.ಜಿ. ರಾವ್**

"ಒಲೆಯ ಮೇಲೆ ಕುದಿಯಲಿಕ್ಕಿಟ್ಟ ಹಾಲನ್ನು ನೀವೆಲ್ಲ ನೋಡಿಯೇ ಇರುತ್ತೀರಿ. ಹಾಲು ಕುದ್ದು, ಒಂದು ಹಂತದಲ್ಲಿ ಬೆಂಕಿಯ ಕಾವನ್ನು ಕಡಿಮೆ ಮಾಡದಿದ್ದಲ್ಲಿ ಪಾತ್ರೆಯಿಂದ ಉಕ್ಕಿ ಚೆಲ್ಲುತ್ತದೆ.ಹಾಲು ಉಕ್ಕುವುದನ್ನು ತಡೆಯಲು ಬೇರೆ ಬೇರೆ ಪ್ರಯತ್ನಗಳಿವೆ. ಉರಿಯನ್ನು ಹದವಾಗಿಡುವುದು, ಉರಿಯನ್ನು ಆರಿಸುವುದು, ಬಾಯಿಯಿಂದ ಗಾಳಿ ಊದುವುದು, ತಣ್ಣೀರು ಹಾಕುವುದು, ನಾಣ್ಯ/ಚಮಚೆಯನ್ನು ಪಾತ್ರೆಯಲ್ಲಿ ಹಾಕುವುದು ಇತ್ಯಾದಿ. ಉಕ್ಕಿ ಚೆಲ್ಲುವ ಹಾಲಿನಲ್ಲಿ ಕೆನೆಯೇ ತುಂಬಿರುತ್ತದೆ ಎಂಬುದನ್ನು ಗಮನಿಸಿ. ಹುಡುಗ–ಹುಡುಗಿಯರ ಉಕ್ಕುವ ಯೌವ್ವನಕ್ಕೆ ಈ ಸಂದರ್ಭವನ್ನು ಹೋಲಿಸಬಹುದು. ಹೊಸ ಹರೆಯದ ತಮ್ಮ ಮಗ–ಮಗಳನ್ನು ಹೆತ್ತವರು ತಮ್ಮ ಬುದ್ಧಿವಂತಿಕೆ ಮತ್ತು ಕುಶಲತೆಯೆಂಬ ಬೆಂಕಿಯ ಕಾವಿನಿಂದ ಸರಿದಾರಿಯಲ್ಲಿ ನಡೆಸುವುದು ಅಗತ್ಯ. ಅವರೊಂದಿಗೆ ಸಮಯ ಕಳೆಯುವುದು, ಆಗಾಗ ಬುದ್ಧಿ ಹೇಳುವುದು, ಅಗತ್ಯವಿದ್ದಷ್ಟು ಮಾತ್ರ ಹಣ ಕೊಡುವುದು. ಒಮ್ಮೊಮ್ಮೆ ಹುಸಿಕೋಪ/ಕಣ್ಣೀರು/ತಮಾಷೆ/ಖುಷಿ ಇಂತಹ ಭಾವನೆಗಳನ್ನು ಹಂಚಿಕೊಳ್ಳುವುದರಿಂದ ಮಕ್ಕಳಲ್ಲಿ ಆಪ್ತತೆಯ ಎಂಬ ಭಾವವು ಹಾಲಿನ ಕೆನೆಯಂತೆ ಜಾಗೃತವಾಗುತ್ತದೆ. ಹರೆಯದಲ್ಲಿ ಮನುಷ್ಯನಲ್ಲಿ ಕೆನೆಗಟ್ಟಿದ ಭಾವನೆಗಳು ಅವನ/ಳ ಜೀವನವನ್ನು ರೂಪಿಸುತ್ತದೆ. ಧನಾತ್ಮಕವಾಗಿ ಇಲ್ಲವೇ ಋಣಾತ್ಮಕವಾಗಿ ತನ್ನೊಂದಿಗೆ (Self) ಕುಟುಂಬದೊಂದಿಗೆ, ಸಮಾಜದೊಂದಿಗೆ ಏರ್ಪಡುವ ಭಾವಗಳು ಪ್ರೀತಿ, ಸಹಾನುಭೂತಿ, ಉದಾರತೆ, ಚತುರತೆ ಅವರ ಏಳಿಗೆಗೆ ಕಾರಣವಾದೀತು. ಮನೆಯವರ ಹಿಡಿತ/ನಿಗಾ ಇಲ್ಲದೇ ಹರೆಯವನ್ನು ಕಳೆದ ವ್ಯಕ್ತಿ ಉಕ್ಕಿ ಚೆಲ್ಲಿದ ಹಾಲಿನಂತೆ–ದುಡುಕು/ಮಾದಕ ವಸ್ತು ವ್ಯಸನಿ/ ಆಕ್ರಮಣಕಾರಿ/ ಧಮನಕಾರಿಯಾಗಿ ರೂಪುಗೊಳ್ಳುವನು.

## ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ವಸಂತ ಕೇದಿಗೆ



ಕೇದಿಗೆ ವಸಂತ್ ರಾವ್‌ರವರು ಕರಾವಳಿ ಕರ್ನಾಟಕದ ಪ್ರಮುಖ ಜಾಹೀರಾತು ಏಜೆನ್ಸಿಗಳಲ್ಲಿ ಸುಮಾರು ನಾಲ್ಕು ದಶಕಗಳ ಗ್ರಾಫಿಕ್ ಹಾಗೂ ಅಂತರ್ಜಾಲ ಪುಟಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಅನುಭವದೊಂದಿಗೆ, ಪ್ರಸ್ತುತ ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ & ಮ್ಯಾನೇಜ್ಮೆಂಟ್‌ನಲ್ಲಿ ಮಾಧ್ಯಮ ಸಲಹೆಗಾರರಾಗಿ ಕೆಲಸ ಮಾಡಿದ ಅನುಭವ, ಈಗ ಸಾರ್ವಜನಿಕ ಸಂಪರ್ಕ ಹಾಗೂ ಕ್ರಿಯೇಟಿವ್ ಸ್ಟುಡಿಯೊದ ಮಾರ್ಗದರ್ಶಕರಾಗಿ ಒಪ್ಪಂದದ ಆಧಾರದಮೇಲೆ ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ವಸಂತ್ ಅವರು 2007 ರಿಂದ ತಮ್ಮದೇ ಆದ ಕೇದಿಗೆ ಇಂಡಿಯಾ ಕಂಪನಿಯಲ್ಲಿ ಸೃಜನಾತ್ಮಕ ವಿನ್ಯಾಸ, ಜಾಹೀರಾತು ಕೌಶಲ್ಯ, ಛಾಯಾಗ್ರಹಣ, ಮುದ್ರಣ ಮಾಧ್ಯಮ ಮತ್ತು ಡಿಜಿಟಲ್ ಮಾರ್ಕೆಟಿಂಗ್ ತಜ್ಞ ಹಾಗೂ ವೆಬ್ಸೈಟ್ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುತ್ತಾ ಇದ್ದಾರೆ. ಇವರ ಪತ್ನಿ ರೂಪ ರಾಣಿ ಮಂಗಳೂರಿನ ಚಿನ್ಮಯ ಮಿಷನ್‌ನಲ್ಲಿ ಕಳೆದ 9 ವರ್ಷಗಳಿಂದ ಗೌರವ ಕಾರ್ಯದರ್ಶಿಯಾಗಿ ಸೇವೆಯನ್ನೂ ಮಾಡುತ್ತಿದ್ದಾರೆ. ಪುತ್ರ ವರುಣ್ ಕೇದಿಗೆ ಪ್ರತಿಭಾವಂತ ಕಲಾವಿದ ಮತ್ತು ಮೈಸೂರಿನ CAVAದಿಂದ ಲಲಿತಕಲೆಗಳ ಪದವೀಧರ, ಪ್ರಸ್ತುತ ಬೆಂಗಳೂರಿನ ಜಾಹಿರಾತು ಏಜನ್ಸಿಯಲ್ಲೇ ಕೆಲಸ ಮಾಡುತ್ತಿದ್ದಾನೆ. ಪುತ್ರಿ ವಂದನಾ ರಾಣಿ ವಿಜ್ಞಾನ ಪದವೀಧರೆ, ಈಗ ತಾನೆ ನಾಟ್ಯ ಶಾಸ್ತ್ರದಲ್ಲಿ ವಿದ್ವತ್ ಪರೀಕ್ಷೆ ಕುಳಿತು ಫಲಿತಾಂಶ ನಿರೀಕ್ಷೆಯಲ್ಲಿ ಇದ್ದಾಳೆ ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿ ದೂರ ಶಿಕ್ಷಣದಲ್ಲಿ ಕಲಿಯುತ್ತಿದ್ದಾಳೆ.

ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿರುವ ವಸಂತ ಕೇದಿಗೆಯವರು ನಮ್ಮ ಪತ್ರಿಕೆಯ ಮಹಾಪೋಷಕರಾಗಿದ್ದಾರೆ. ಅವರಿಗೂ ಅವರ ಮನೆಯವರೆಲ್ಲರಿಗೂ ಶ್ರೀ ಶಾರದಾ ಅಭಿನಂದನೆಗಳು.

## ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ



**–ಡಾ.ಬಿ ಜನಾರ್ದನ ಭಟ್**

**(ದಶಂಬರ್ ಸಂಚಿಕೆಯಿಂದ ಮುಂದುವರಿದುದು)**

ಅವರು ಕಾರ್ಕಳದ ವೆಂಕಟರಮಣನ ಸನ್ನಿಧಿಯಲ್ಲಿ, ತಮ್ಮ ತಪ್ಪುಗಳನ್ನೆಲ್ಲ ನೆನೆದು, ಕ್ಷಮೆ ಬೇಡುತ್ತಾ ಹಾಡಿದ ಪಶ್ಚಾತ್ತಾಪದ ಹಾಡು ಹೀಗಿದೆ: (ರಾಗ: ಕಾಮವರ್ಧಿನಿ – ಆದಿ ತಾಳ).

*ತಪ್ಪುಗಳೆಲ್ಲವ ಒಪ್ಪುಗೊಳ್ಳಯ್ಯ ಶ್ರೀ ।*
*ಚಪ್ಪರ ಶ್ರೀನಿವಾಸ ॥ ॥ ಪಲ್ಲ ॥*
*ಸರ್ಪರಾಜಗಿರಿಯಪ್ಪ ತಿಮ್ಮಪ್ಪನೆ ।*
*ದರ್ಪಕತಾತನೆ ತಾ । ಸಜ್ಜನಪ್ರೀತ ॥ ॥ ಅನು ॥*

*ಮಾಧವ ನಿನ್ನಯ ಮಹಿಮೆ ತಿಳಿಯರಪ–।*
*ರಾಧವ ಮಾಡಿದೆ ದಾರಿದ್ರ್ಯದ ॥*
*ಬಾಧೆಯಿಂದ ತವ ಪಾದ ದರುಶನದ ।*
*ಹಾದಿಯ ಕಾಣದಾದೆ। ನಾ ದ್ರೋಹಿಯಾದೆ ॥೧॥*

*ತ್ರಾಣವಿರುವಾದ ಕಾಣಿಕೆ ಹಾಕಿದೆ ।*
*ದೀನದಾರಿದ್ರ್ಯದ ಹೊತ್ತಿನಲಿ ॥*
*ಮೇಣದರಿಂದಲಿ ತೆಗೆದು ತೆಗೆದು ಪಂಚ – ।*
*ಪ್ರಾಣಕ್ಕಾಹುತಿಯ ಕೊಟ್ಟೆ । ಅಪರಾಧಪಟ್ಟೆ ॥೨॥*

*ಮಂದವಾರ ದಿನಕ್ಕೊಂದೂಟವ ಸತ್ತ – ।*
*ದಿಂದಿರುವಾಗ ನಾ ನೇಮಗೈದೆ ॥*
*ಮಂದಭಾಗ್ಯ ಜ್ವರದಿಂದ ಪೀಡಿತನಾದ – ।*
*ರಿಂದೆರಡೂಟವನೂ । ಮಾಡಿದೆ ನಾನು ॥೩॥*

*ಶನಿವಾರಕ್ಕೊಂದಾಣೆ ಕಾಣಿಕೆ ಹಾಕುತ್ತ ।*
*ಮಿನುಗುವ ಡಬ್ಬಿಯ ನಾ ಮಾಡಿದೆ ॥*
*ಎನಗೆ ದಾರಿದ್ರ್ಯವ ಕೊಟ್ಟ ಕಾರಣದಿಂದ ।*
*ಹಣವೆಲ್ಲ ಗುಣನುಂಗಿತು।ಪಾದಕೆ ಗೊತ್ತು ॥೪॥*

*ದೊಡ್ಡ ದಾರಿದ್ರ್ಯದ ಗುಡ್ಡೆ ಬಿದ್ದುದರಿಂದ ।*
*ದುಡ್ಡೆಲ್ಲ ತೆಗೆದೆ ನಾ ದಡ್ಡನಾಗಿ ॥*
*ಅಡ್ಡಬಿದ್ದು ಕೈಯೊಡ್ಡಿ ಬೇಡುವೆ ಸ್ವರ್ಣ – ।*
*ಗುಡ್ಡೆಯ ಮೇಲಿರುವ । ಮಹಾನುಭಾವ ॥೫॥*

*ಭಂಡಾರದ್ರೋಹ ಬ್ರಹ್ಮಾಂಡ ಪಾಪಾಗ್ನಿಯು ।*
*ಮಂಡೆಯೊಳುರಿವುದು ಖಂಡಿತದಿ ॥*
*ಪುಂಡರೀಕಾಕ್ಷನೇ ಕರುಣಾಮೃತ ರಸ–।*
*ಕುಂಡದೊಳ್ ಮೀಯಿಸಯ್ಯ । ವೆಂಕಟರಾಯ॥೬॥*

*ದೃಢಭಕ್ತಿಯನು ಕೊಟ್ಟು ಸಲಹಬೇಕಲ್ಲದೆ ।*
*ಕೆಡುಕು ಮಾಡುವುದೇನು ಜಡಜನಾಭ ॥*
*ಕಡಲಶಯನ ಲಕ್ಷ್ಮೀನಾರಾಯಣ ನ – ।*
*ಮ್ಮೊಡೆಯ ಪಡುತಿರುಪತೀಶ । ರವಿಕೋಟಿಭಾಸ॥೭॥*

ಪಶ್ಚಾತ್ತಾಪವೇ ಪ್ರಾಯಶ್ಚಿತ್ತ' ಎನ್ನುವಂತೆ ತನ್ನ ತಪ್ಪನ್ನೆ ಮುಚ್ಚುಮರೆಯಿಲ್ಲದೆ ಹಾಡಿದರು. ದೇವಸ್ಥಾನದ ಕಾಳಭೈರವನು ಕನಸಿನಲ್ಲಿ ಬಂದು, ಕಾರ್ಕಳ ದೀಪೋತ್ಸವದ ವರ್ಣನೆಯ ಪದ್ಯಗಳ ರಚನೆ ಮಾಡಿದರೆ ನಿನ್ನ ಮನಸ್ಸಿನ ಪಾಪ ಭೀತಿ ಸಂಪೂರ್ಣವಾಗಿ ತೊಳೆದು ಹೋಗುತ್ತದೆ ಎಂದು ಸೂಚನೆ ನೀಡಿದನಂತೆ. ಕಾಳಭೈರವನಿಂದ ಪ್ರೇರಿತರಾದ ಹರಿದಾಸರು ಪ್ರತಿಪದದಿಂದ ತೊಡಗಿ ಹುಣ್ಣಿಮೆಯವರೆಗೆ ನಡೆಯುವ ದೀಪೋತ್ಸವವನ್ನು ಕಣ್ಣಿಗೆ ಕಟ್ಟುವಂತೆ ಸುಮಾರು ನೂರು ಪದ್ಯಗಳಲ್ಲಿ ಹಾಡಿದ್ದಾರೆ.

ಆಮೇಲೆ ಹರಿದಾಸರ ಮನಸ್ಸು ಶಾಂತ ಸ್ಥಿತಿಗೆ ಬಂತು. ಅವರು ತಮ್ಮ ಮನೆಗೆ ಮರಳಲು ನಿರ್ಧರಿಸಿ, ದೇವರಲ್ಲಿ ಅಪ್ಪಣೆ ಕೇಳಲೆಂಬಂತೆ ಹಾಡಿದ ಹಾಡು ಹೀಗಿದೆ: (ರಾಗ : ಶಂಕರರಾಭರಣ, ಮಿಶ್ರಝಂಪೆತಾಳ)

*ಪೋಗಿ ಬರುವೆನು ಎನ್ನ ಮನೆಗೆ ಜಗದೀಶ ।*
*ಭಾಗವತಪ್ರಿಯ ಭಾಗೀರಥೀಜನಕ ॥ ॥ ಪಲ್ಲ ॥*

*ವರುಷವರುಷಕೆ ನಿನ್ನ ದರುಶನವನಿತ್ತೆನ್ನ ।*
*ಕರುಣಿಸೈ ಶೇಷಾದ್ರಿವರ ಶ್ರೀನಿವಾಸ ॥*
*ದುರಿತಕೋಟಿಗಳ ಸಂಹರಿಸಿ ನಿನ್ನಯ ಕರುಣಾ–।*
*ವರ ಪ್ರಸಾದವನೀಯೊ ಜನಮೆಚ್ಚುವಂತೆ ॥೧॥*

*ಜಯಹೊಂದಿಸುತ ಮನದ ಭಯವೆಲ್ಲ ಪರಿಹರಿಸಿ।*
*ನಿಯತಮತಿಯೀಯೊ ನೀರಜನಾಭನೆ ॥*
*ದಯಮಾಡೊ ತವ ಪಾದಸೇವೆಯನ್ನಿತ್ತೆನಗೆ ।*
*ಪ್ರಿಯನಾಗು ಶ್ರೀಹರಿಯೆ ಭಯನಿವಾರಣನೆ ॥೨॥*

*ನೀನೆ ಗತಿಯೆನಗೆ ಶ್ರೀನಿವಾಸನೆ ಭಕ್ತಾ–।*
*ಧೀನ ನೀನೆಂಬ ಬಿರುದುಂಟಾದಡೆ ॥*
*ಮಾನಿಸೈ ಶ್ರೀಲಕ್ಷ್ಮೀನಾರಾಯಣನೆ ನಿನ್ನ ।*
*ಧ್ಯಾನಸೌಭಾಗ್ಯಗಳನ್ನಿತ್ತೆನ್ನ ಸಲಹೊ ॥೩॥*

ಎರಡನೆಯ ಬಾರಿಗೆ ತಮ್ಮ ಮನೆಗೆ ಹಿಂದಿರುಗಿದ ಮೇಲೆ, ಅವರು ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದರು. ಸುಮಾರು ಕ್ರಿ.ಶ.1905–1906ರಿಂದ ಸುಮಾರು ಹದಿನೆಂಟು ವರ್ಷಗಳ ಪರ್ಯಂತ ಆಗಿನ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಾದ್ಯಂತ ಅವರು ಹರಿಕಥಾ ಕಾಲಕ್ಷೇಪಗಳನ್ನು, ಪ್ರವಚನಗಳನ್ನು ಮಾಡುತ್ತಾ ಜನಸಮಾನ್ಯರ ಸಾಂಸಾರಿಕ ರೋಗಗಳಿಗೆ ಚಿಕಿತ್ಸೆ ನೀಡುತ್ತಾ, ಇಹ–ಪರದ ಬಗ್ಗೆ ಶಿಕ್ಷಣ ನೀಡುತ್ತಾ ಜನರನ್ನು ಸತ್ಪಥದಲ್ಲಿ ನಡೆಸುವ ಕೈಂಕರ್ಯದಲ್ಲೆ ತಮ್ಮನ್ನು ಅಭೂತಪೂರ್ವವಾಗಿ ತೊಡಗಿಸಿಕೊಂಡರು. ಇದರಿಂದ ನಿರಕ್ಷರಕುಕ್ಷಿಗಳಿಂದ ಹಿಡಿದು ವಿದ್ವಾಂಸರವರೆಗಿನ ಎಲ್ಲರ ಗೌರವ ಆದರಗಳಿಗೆ ಅವರು ಪಾತ್ರರಾದರು.

**ಅಂಕಿತ :** ಲಕ್ಷ್ಮೀನಾರಾಯಣಎಂದು ತನ್ನ ಹೆಸರನ್ನೇ ಅಂಕಿತವನ್ನಾಗಿ ಬಳಸುತ್ತಿದ್ದ ಪಾವಂಜೆಯವರು ಯಾವ ದೇವರ ಕೀರ್ತನೆಯೇ ಇರಲಿ ಕೊನೆಯಲ್ಲಿ ಹರಿಸರ್ವೋತ್ತಮ' ಎಂಬ ದ್ವೈತ ಸಿದ್ಧಾಂತದ ತತ್ವಕ್ಕೆ ಸರಿಯಾಗಿ ಆಯಾ ದೇವರುಗಳನ್ನು ಶ್ರೀಹರಿಯ ಸಖನೋ, ಮಡದಿಯೋ, ದಾಸನೋ, ತಂಗಿಯೋ, ತಮ್ಮನೋ, ಮೊಮ್ಮಗನೋ ಎಂಬಂತೆ ಸಂಬೋಧಿಸಿ, ಲಕ್ಷ್ಮೀನಾರಾಯಣ' ಎಂಬ ಅಂಕಿತದೊಂದಿಗೆ ಕೀರ್ತನೆಯನ್ನು ಮುಗಿಸುತ್ತಿದ್ದರು. ಅವರು ರಚಿಸಿದ ಎಲ್ಲಾ ಭಾಷೆಯ ಪದ್ಯಗಳನ್ನು ಅದು ಭಜನೆಯೆ ಇರಲಿ, ಹರಿಕಥೆಯ ಹಾಡು ಇರಲಿ, ಪತ್ರಲೇಖನವೇ ಇರಲಿ, ಜೋಗುಳವೇ ಇರಲಿ, ಮದುವೆಯಲ್ಲಿ ಹಾಸ್ಯಕ್ಕೆ ದೂರುವ ಹಾಡೇ ಇರಲಿ, ಕೊನೆಯಲ್ಲಿ ಲಕ್ಷ್ಮೀನಾರಾಯಣ ಎಂಬ ಅಂಕಿತ ನಾಮವನ್ನು ಹಾಕಿಯೇ ಪದ್ಯಗಳನ್ನು ರಚಿಸಿದ್ದರು.

ಇವರು ತಮ್ಮ ಮನೆಯ ನಿತ್ಯದ ಪೂಜೆಯಲ್ಲೂ ವೇದ ಮಂತ್ರಗಳನ್ನು ಬಳಸದೆ ಕೀರ್ತನೆಯಿಂದಲೇ ದೇವರ ಪೂಜೆ ಮುಗಿಸುತ್ತಿದ್ದರು. ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರ ರಚನೆಗಳಲ್ಲಿ ಕಾಶಿಯ ಸಂಸ್ಕೃತ ಪಾಂಡಿತ್ಯ ಎದ್ದು ಕಾಣುತ್ತದೆ. ಮೇಲ್ನೋಟಕ್ಕೆ ಸರಳ ಕನ್ನಡ ಭಜನೆ ಎಂದು ಭಾಸವಾದರೂ ಅಲ್ಲಿ ಅವರು ಬಳಸಿದ ಶಬ್ದದ ಅರ್ಥವನ್ನು ತಿಳಿಯಬೇಕಾದರೆ ತುಂಬಾ ಯೋಚನೆ ಮಾಡಬೇಕು ಅಥವಾ ತಿಳಿದವರನ್ನು ಕೇಳಬೇಕಾಗುತ್ತದೆ. ಇಷ್ಟಾದರೂ ವಿನಮ್ರವಾಗಿ, ಕನಕ ಪುರಂದರ ಮುಖ್ಯ ದಾಸರಂತೆ । ಗುಣವೆನಗಿನಿತಿಲ್ಲ, ಎಂದು ಅವರು ಹೇಳಿಕೊಂಡಿದ್ದಾರೆ.

**(ಪಾವಂಜೆ ದೇವಸ್ಥಾನ) :** 1914 ರ ವೇಳೆಗೆ ಪಾವಂಜೆಯಲ್ಲಿ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಯ ದೇವಾಲಯ ಕಟ್ಟಲಾರಂಭಿಸಿದ ಮೇಲೆ ಹಿತೈಷಿಗಳ ಒತ್ತಾಯಕ್ಕೆ ಮಣಿದು ಅದನ್ನೇ ಕೇಂದ್ರವಾಗಿರಿಸಿಕೊಂಡು, ಮೊದಲಿನಂತೆ ಹರಿಕಥಾ ಕಾಲಕ್ಷೇಪಕ್ಕಾಗಿ ಊರೂರು ಸುತ್ತುತ್ತಿದ್ದರು.

ಆಸ್ತಿ ಪಾಸ್ತಿ, ಸಾಲ, ಗೇಣಿ ಎಂದು ಲೌಕಿಕ ವ್ಯವಹಾರಗಳಲ್ಲೂ ತೊಡಗಿ ಜಿಪುಣ ಎಂದೂ ಅವರು ಕರೆಯಿಸಿಕೊಂಡದ್ದಿದೆ. ಅವರು ಪತ್ರಗಳನ್ನು ಕೂಡ ಕವನರೂಪದಲ್ಲಿಯೇ ಬರೆದು ಕಳಿಸುತ್ತಿದ್ದರು. ಗಣ್ಯರಾದ ರಾಮಣ್ಣ ಶೆಟ್ಟರೆಂಬವರಿಗೆ ತನ್ನ ಒಕ್ಕಲುಗಳು ಗೇಣಿ ಕೊಡಲಿಲ್ಲವೆಂದು ದೂರಿ ಬರೆದ ಪತ್ರ ಇಂತಿದೆ:

*ಶ್ರೀ ಮಹಾದೇವಿಯಾ ಪಾದಾರವಿಂದ*
*ಭ್ರಮರ ರಾಮಣ್ಣ ಶೆಟ್ರ ಸನ್ನಿಧಿಗೆ*
*ಪ್ರೇಮಿ ಹರಿದಾಸ ಬರಕೊಂಡರ್ಜಿಯನು ಪ್ರೀತಿ*
*ಕಾಮು ರಾಘವ ಚಿತ್ತವಿಪುದು ॥ ೧ ॥*
*ರಕ್ಕಸರಿಗೆಣೆಯಾದ ವಕ್ಕಲುಗಳಿಂದ ನಾ*
*ಸಿಕ್ಕಿಬಿದ್ದೆನು ಮಹಾರಾಯ*
*ಠಕ್ಕಿಸುತ ಪರದ್ರವ್ಯ ಮುಕ್ಕುವರೆನ್ನ ನುಡಿ*
*ಲೆಕ್ಕಿಸುವರೇ ಮಮ ಪ್ರಿಯ ॥ ೨ ॥*
*ಆರು ಮುಡಿಯಕ್ಕಿ ಮೂರಾರು ರೂಪಾಯಿ ಕುಂ*
*ಬಾರ ಕೊರಗಮಗನು ಬಸವ*
*ಮೀರಿ ನಿಮ್ಮಯ ಮಾತ ತಾರವಾದರು ಕೊಡದೆ*
*ಭೂರಿ ವಿಭವದಿ ನಿತ್ಯ ಮೆರೆವ ॥ ೩ ॥*
*ಲಕ್ಕಣ್ಣ ಮೂಲ್ಯನಿವ ಪಕ್ಕ ಕಣ್ಣೋಜಿ ಕರಿ*
*ಬೆಕ್ಕಿನಂತಿಹುದು ಇವನ ಕಣ್ಣು*
*ಮಿಕ್ಕ ನಿಮ್ಮಯ ಮಾತ ಕೊಡದಿರುವನೊಂದು ಮುಡಿ*
*ಅಕ್ಕಿಯಂ ವಕ್ಕಣಿಪುದೇನು ॥ ೪ ॥*
*ಸುಬ್ಬಪ್ಪ ಶೆಟ್ಟಿ ಸುಳ್ಳಾಡುವುದರಲಿ ಜಗದೊ*
*ಳೊಬ್ಬನೇ ಸಾಕು ಮತ್ತಾಕೆ*
*ಹೆಬ್ಬಾವಿನಂತೆ ನುಂಗುವೆನು ಪರದ್ರವ್ಯ*
*ದುರ್ಭಾಗ್ಯ ಕಷ್ಟ ನಷ್ಟ ದುಷ್ಟ ॥ ೫ ॥*

ಒಂದು ದಿನ ರಾತ್ರಿ ಮಲಗಿದ್ದಾಗ, ಹರಿದಾಸರ ಮನೆಯ ಮೇಲೆ ದೊಡ್ಡ ಮರವೊಂದು ಉರುಳಿಬಿದ್ದು ಅವರು ಮತ್ತು ಪತ್ನಿ ಬದುಕಿದ್ದೇ ಹೆಚ್ಚು ಎಂಬಂತಹ ಒಂದು ಘಟನೆ ನಡೆಯಿತು. ಆ ಸಂದರ್ಭದ ಒಂದು ಕೀರ್ತನೆಯೂ ಇದೆ.

(ಮುಂದುವರಿಯುವುದು...)

## ಸಿ. ಎಸ್.ರಾವ್‌ರಿಗೆ ಪ್ರಶಸ್ತಿ



ನಮ್ಮ ಸಂಘದ ಸಲಹೆಗಾರ ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ DGM ಆದ ಸಿ.ಎಸ್.ರಾವ್ 2020–21ನೇ ಸಾಲಿನ "Zone Chair Person Excellence Award" ತನ್ನದಾಗಿಸಿಕೊಂಡಿದ್ದಾರೆ. ಲಯನ್ಸ್ ಕ್ಲಬ್ Dt.317C(zone) ವಲಯದಲ್ಲಿ 4 ಕ್ಲಬ್ ಇವರ ಕೆಳಗೆ ಬಂದಿದ್ದು ಉತ್ತಮ ಸಾಧನೆಗಾಗಿ ಸಿ.ಎಸ್.ರಾಯರು ಈ ಪ್ರಶಸ್ತಿ ಪಡೆದಿರುವರು. ಬ್ರಹ್ಮಗಿರಿ ಲಯನ್ಸ್ ಸ್ಥಾಪಕಧ್ಯಕ್ಷರಾಗಿದ್ದ ಇವರು ಮೊದಲು ವೈಯುಕ್ತಿಕ ಉತ್ತಮ ಕಾರ್ಯದರ್ಶಿ, ಉತ್ತಮ ಅಧ್ಯಕ್ಷ ಪ್ರಶಸ್ತಿ ಪಡೆದಿದ್ದರು. ಇವರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾಕ್ಕೆ ದೇಣಿಗೆ

ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ–ಅರ್ಚಕ ಪರಿಪಾಲನಾ ಸಭಾ, ಮಂಗಳೂರು ಇದರ ಉದ್ಘಾಟನೆಯ ಸಂದರ್ಭದಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರು, ಪ್ರಸ್ತುತ ಸಲಹೆಗಾರರಾದ ಶ್ರೀ ಸಿ.ಎಸ್.ರಾವ್ ರೂ.10,000/– ದೇಣಿಗೆಯನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಇವರಿಗೆ ಅರ್ಚಕ ಪುರೋಹಿತ ಪರಿಪಾಲನಾ ಸಭಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

## ಕು। ಶ್ರುತಿ ಯು.ರಾವ್ ಇವರಿಗೆ ಯೋಗ ಹಾಗೂ ನ್ಯಾಚುರೋಪತಿ ಕೋರ್ಸಿನಲ್ಲಿ ರಾಜ್ಯಕ್ಕೆ ಪ್ರಥಮ ರಾಂಕ್



ಕು। ಶ್ರುತಿ ಯು.ರಾವ್ ಇವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಯೋಗ ಹಾಗೂ ನ್ಯಾಚುರೋಪತಿ ಕೋರ್ಸಿನಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕಗಳಿಸಿರುತ್ತಾರೆ. ಇವರು ಮೂಡುಬಿದ್ರೆಯ ಆಳ್ವಾಸ್ ಯೋಗ ಮತ್ತು ನ್ಯಾಚುರೋಪತಿ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು ಅಂತಿಮ ವರ್ಷದ ಪರೀಕ್ಷೆಯಲ್ಲಿಯೂ ವಿ.ವಿ ಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಇವರು ಉತ್ತಮ ಯೋಗಪಟು ಆಗಿದ್ದು ರಾಜ್ಯ ಹಾಗೂ ರಾಷ್ಟ್ರಮಟ್ಟದ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇದರ ಹೊರತಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ 2021 ಸಾಲಿನ ಪ್ರತಿಭಾ ಪುರಸ್ಕಾರದಲ್ಲಿ–Achievers Award ಪಡೆದಿರುತ್ತಾರೆ .

ಇವರು ಮಂಗಳೂರಿನ ನಿವಾಸಿಯಾಗಿರುವ ಶ್ರೀ ಆರೂರು ಉಪೇಂದ್ರ ರಾವ್ (ಉಪ ವ್ಯವಸ್ಥಾಪಕರು, KMF, ಮಂಗಳೂರು) ಹಾಗೂ ಶ್ರೀಮತಿ ವೀಣಾ ಯು.ರಾವ್ ರವರ ಸುಪುತ್ರಿ ಆಗಿರುತ್ತಾರೆ.

## ಶ್ರೀ ಎಲ್ಲೂರು ಜಗದೀಶ ರಾಯರಿಗೆ ನುಡಿ ನಮನಗಳು



ಶ್ರೀ ಎಲ್ಲೂರು ಜಗದೀಶ ರಾಯರು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಹಾಗೂ ಶ್ರೀಮತಿ ಗಿರಿಜಮ್ಮ ಅವರ 10 ಮಕ್ಕಳಲ್ಲಿ ಮೂರನೆಯ ಸುಪುತ್ರನಾಗಿ 11–05–1934ರಂದು ಜನಿಸಿದರು. ಬಾಲ್ಯದಿಂದಲೇ ಸಂಗೀತಾಭ್ಯಾಸವನ್ನು ತಂದೆಯವರಿಂದ ಕಲಿತರು. ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಹಾಗೂ ಟಿಸಿಹೆಚ್ ಶಿಕ್ಷಣಗಳನ್ನು ಮುಗಿಸಿದರು. ಉದ್ಯಾವರ ಆಯುರ್ವೇದ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣವನ್ನು ಮಾಡುತ್ತಿದ್ದಾಗ, ಸಂಗೀತದ ಸೆಳೆತಕ್ಕೊಳಗಾಗಿ ತನ್ನ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಮೈಸೂರು ಶ್ರೀ ರಾಜರತ್ನಮ್ ಪಿಳ್ಳೆಯವರಲ್ಲಿ ಸಂಗೀತ ಹಾಗೂ ಭರತನಾಟ್ಯ ಶಿಕ್ಷಣ ಪಡೆದರು. ನಂತರ ಗುಬ್ಬಿ ವೀರಣ್ಣ ಕಂಪನಿಯಲ್ಲಿ ಹಾರ್ಮೋನಿಯಂ ವಾದನದಲ್ಲಿ ಪರಿಣತಿಯನ್ನು ಪಡೆದರು. ಊರಿಗೆ ಮರಳಿದ ನಂತರ ಸಂಗೀತ ಕ್ಷೇತ್ರದಲ್ಲಿ ಸೇವೆಯನ್ನು ಮುಂದುವರಿಸಿದರು. ಕಲಾರಾಧಕ, ಕಲಾಸಾಧಕ, ಕಲಾಸೇವಕ, ಕಲಾತಪಸ್ವಿಯಾಗಿ ಜೀವನದ ಪ್ರತೀಕ್ಷಣಗಳನ್ನೂ ಸಂಗೀತ ಶಾರದೆಯ ಸೇವೆಗಾಗಿ ಮುಡಿಪಾಗಿಟ್ಟು ಸಂಗೀತವನ್ನೇ ತನ್ನ ವೃತ್ತಿಯಾಗಿ ಮಾಡಿಕೊಂಡು ಕಲಾಶಾರದೆಯ ಸೇವೆಯನ್ನು ಜೀವನದುದ್ದಕ್ಕೂ ಮಾಡುತ್ತಾ ಬಂದರು. ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳ ಹೆಚ್ಚಿನ ಶಾಲೆಗಳಲ್ಲಿ ವಾರ್ಷಿಕೋತ್ಸವಗಳ ಸಂದರ್ಭಗಳಲ್ಲಿ ನಾಟಕ, ಸಂಗೀತ, ನಾಟ್ಯಗಳಲ್ಲಿ ಮಕ್ಕಳಿಗೆ ತರಬೇತಿ ನೀಡಿ ಅವರನ್ನು ಪ್ರದರ್ಶನಕ್ಕೆ ಅಣಿಗೊಳಿಸುತ್ತಿದ್ದರು. ನಾಟಕಗಳಿಗೆ ಇವರು ಸ್ವತಃ ಪದ್ಯ ರಚನೆ ಮಾಡುತ್ತಿದ್ದರು. ಇವರ ಕವನಗಳ ಸಾಹಿತ್ಯ ಹಾಗೂ ರಾಗ ಸಂಯೋಜನೆಗಳು ಅದ್ಭುತವಾಗಿದ್ದು ಎಲ್ಲರ ಮೆಚ್ಚುಗೆಯನ್ನು ಪಡೆಯುತ್ತಿದ್ದವು. ಇವರು ಬರೆದ ಹಲವಾರು ಭಾವಗೀತೆಗಳು ಕಿನ್ನಿಗೋಳಿಯ ಅಂತರಂಗ ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ. ಇದಲ್ಲದೆ ಭಜನೆ, ಹರಿಕಥೆ, ಸಂಗೀತ ನಾಟ್ಯಗಳಿಗೆ ಪಕ್ಕವಾದ್ಯದಲ್ಲಿ ಸಹಕಾರ ನೀಡುತ್ತಿದ್ದರು. ಇವರೊಂದಿಗೆ ಎರ್ಮಾಳ್ ವಾಸುದೇವರಾವ್‌ರವರು ತಬಲಾ ವಾದಕರಾಗಿ, ಬೆಳ್ಮಣ್ ಹರಿದಾಸ ಉಡುಪರು ಕೊಳಲು ವಾದಕರಾಗಿ ಸಹಕರಿಸುತ್ತಿದ್ದರು. ಇವರು ಮಲ್ಪೆ ಶಂಕರನಾರಾಯಣ ಸಾಮಗ, ಮಲ್ಪೆ ರಾಮದಾಸ ಸಾಮಗ, ಶೇಣಿ ಗೋಪಾಲಕೃಷ್ಣ ಭಟ್, ಪೊಳಲಿ ಜಗದೀಶ ದಾಸ್, ಅಂಬಾತನಯ ಮುದ್ರಾಡಿ, ಶ್ರೀಶದಾಸ ಉಡುಪಿ, ವಾಗೀಶ ಆಚಾರ್ಯ ಹೊಸಬೆಟ್ಟು, ಮೊದಲಾದ ಘಟಾನುಘಟಿ ಹರಿದಾಸರುಗಳ ಹರಿಕಥಾ ಕಾರ್ಯಕ್ರಮಕ್ಕೆ ಹಾರ್ಮೋನಿಯಂ ಸಾತ್ ಕೊಟ್ಟ ಮಹನೀಯರು. ಬಹಳಷ್ಟು ಜನ ಶಿಷ್ಯಂದಿರಿಗೆ ಯಾವುದೇ ಫಲಾಪೇಕ್ಷೆ ಇಲ್ಲದೆ ಸಂಗೀತ ಕಲಿಸಿದ ಸಾಧಕ. ಇಂತಹ ಮೇರುವ್ಯಕ್ತಿತ್ವದ ಎಲ್ಲೂರು ಜಗದೀಶ ರಾಯರು ತಾ.02–02–2022ರಂದು ಸ್ವರ್ಗಸ್ಥರಾದರು. ಇವರು ಪತ್ನಿ ಶಾಂತ, ನಾಲ್ಕು ಪುತ್ರರು, ಐದು ಪುತ್ರಿಯರು, ಬಂಧುಮಿತ್ರರು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ. ಶ್ರೀಯುತರ ಆತ್ಮಕ್ಕೆ ಸದ್ಗತಿ ಲಭಿಸಲಿ ಎಂದು ಪ್ರಾರ್ಥಿಸುತ್ತೇವೆ.



ಶ್ರೀ ಕೃಷ್ಣಾಪುರ ಮಠದ ಪರ್ಯಾಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಥಬೀದಿಯ ಪೂರ್ಣಪ್ರಜ್ಞ ಮಂಟಪದಲ್ಲಿ, ಶ್ರೀಮತಿ ದಿಶಾ ಚೇತನ ರಾವ್ ಮೂಡಬಿದ್ರಿ ಮತ್ತು ಬಳಗದವರಿಂದ ವೀಣಾವಾದನ ನಡೆಯಿತು.



PRODUCTS ARE AVAILABLE AT ATTRACTIVE DISCOUNT PRICES





BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



HARIKRISHNA DIGITALS
5-244-A1, SRIRANGA, First Floor, V. P. Nagar, 3rd Main, Kunjibettu Post - 576102, Udupi District



WE UNDERTAKE
* All types Outdoor and Indoor Photography & Videography
* Pre-wedding shoot * Post-wedding shoot * Passport Photography
* Photo Frames * Digital album creations
* Digitalisation of Old album
* Athorised Udayavani Advertisement Agency
* Offset, Screen, Digital & Banner Printing
* All types of Invitations * Project works of Schools & Colleges
* Book design & printing * Visiting cards
* A4 and A3 Black-White and Colour Printing and Xerox




+91 94487 24161, +91 94816 10371, +91 7019367390 E-mail : harikrishnadigitals2003@gmail.com



Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



*With Best Complimemts From*
SRI M. SHAILESH RAO
Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com



ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ–ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ಶುಭ ವಿವಾಹ

ಕಾಪುವಿನ ಶ್ರೀಮತಿ ರತ್ನಾವತಿ ಮತ್ತು ಶ್ರೀ ಆಶೋಕ್ ಕುಮಾರ್ ಇವರ ಪುತ್ರಿ **ಚಿ| ಸೌ| ಅಮೃತ** ಮತ್ತು ಶ್ರೀಮತಿ ವಿನಯ ಮತ್ತು ಶ್ರೀ ವೆಂಕಟೇಶ್ ಶ್ಯಾನುಭೋಗ್‌ರವರ ಪುತ್ರ **ಚಿ| ಸುಬ್ರಹ್ಮಣ್ಯ** ಇವರ ವಿವಾಹವು ತಾ.27.01.2022 ರಂದು ಕಾಪು "ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ಸಭಾಭವನ"ದಲ್ಲಿ ಜರಗಿತು.

★★★★ ★★★★

ಶ್ರೀಮತಿ ಗೀತಾ ಮತ್ತು ಶ್ರೀ ಜಗದೀಶ್ ಶ್ಯಾನುಭಾಗ್ ಇವರ ಪುತ್ರ **ಚಿ| ಪ್ರತೀಕ್** ಮತ್ತು ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಬೈಕಾಡಿ ಪ್ರಕಾಶ್ ರಾಯರ ಪುತ್ರಿ **ಚಿ| ಸೌ| ಶ್ರೇಯ** ಇವರ ವಿವಾಹವು ತಾ.27.01.2022ರಂದು ನೀಲಾವರದಲ್ಲಿರುವ "ಶ್ರೀ ಗಂಗಾ ವಿಶ್ವೇಶ್ವರ ಸಭಾಭವನ" ದಲ್ಲಿ ಜರಗಿತು.

★★★★ ★★★★

ಶ್ರೀಮತಿ ಆಶಾಲತಾ ಮತ್ತು ಶ್ರೀ ಶ್ರೀನಿವಾಸ ರಾಯರ ಪುತ್ರ **ಚಿ| ಕಾರ್ತಿಕ್** ಮತ್ತು ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಬೈಕಾಡಿ ಪ್ರಕಾಶ್ ರಾಯರ ಪುತ್ರಿ **ಚಿ| ಸೌ| ಕಾವ್ಯ** ಇವರ ವಿವಾಹವು ತಾ.07.02.2022 ರಂದು ನೀಲಾವರದಲ್ಲಿರುವ "ಶ್ರೀ ಗಂಗಾ ವಿಶ್ವೇಶ್ವರ ಸಭಾಭವನ" ದಲ್ಲಿ ಜರಗಿತು.

★★★★ ★★★★

ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಶಂಕರ ಕನಕ ಇವರ ಪುತ್ರ **ಚಿ| ಹೆಚ್.ಪ್ರದೀಪ** ಮತ್ತು ಶ್ರೀಮತಿ ಹರ್ಷಿನಿ ಮತ್ತು ಶ್ರೀ ಸಚ್ಚಿದಾನಂದ ರಾವ್ ಇವರ ಪುತ್ರಿ **ಚಿ| ಸೌ| ಶರಧಿ** ಇವರ ವಿವಾಹವು ತಾ.23.01.2022ರಂದು ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ"ದಲ್ಲಿ ಜರಗಿತು.

★★★★ ★★★★

ಶ್ರೀಮತಿ ಪಾವನಾ ಮತ್ತು ಶ್ರೀ ಡಾ. ಅರುಣ್ ಕುಮಾರ್ ಇವರ ಪುತ್ರಿ **ಚಿ| ಸೌ| ಅಪರ್ಣಾ** ಮತ್ತು ಶ್ರೀಮತಿ ಮಮತಾ ಮತ್ತು ಶ್ರೀ ಮಂಜುನಾಥ್ ಇವರ ಪುತ್ರ **ಚಿ| ಅಮೋಘ** ಇವರ ವಿವಾಹವು ತಾ. 10.02.2022 ರಂದು 'ಕಾಪು ಪ್ಯಾಲೇಸ್ ಗಾರ್ಡನ್' ನಲ್ಲಿ ಜರಗಿತು.

★★★★ ★★★★

ಶ್ರೀಮತಿ ಶುಭದಾ ಸುಧೀರ್ ಮತ್ತು ಶ್ರೀ ಸುಧೀರ್ ಕುಮಾರ್ ಪುತ್ರ **ಚಿ| ಆಕಾಶ್ ಐ.ಪಿ.** ಮತ್ತು ಶ್ರೀಮತಿ ಕವಿತಾ ಮತ್ತು ಶ್ರೀ ಬೊಕ್ಕಸ ಚಂದ್ರಶೇಖರ್ ರಾವ್ ಇವರ ಪುತ್ರಿ **ಚಿ.ಸೌ.ಚೈತ್ರ** ಇವರ ವಿವಾಹವು ತಾ.23.01.2022 ರಂದು ಮೂಡಬಿದ್ರೆ ಬನ್ನಡ್ಕದಲ್ಲಿರುವ "ಪಾಂಚಜನ್ಯ ಸಭಾಭವನ" ದಲ್ಲಿ ಜರಗಿತು.

★★★★ ★★★★

ಶ್ರೀಮತಿ ಶೋಭಾ ರಾವ್ ಮತ್ತು ಶ್ರೀ ಜಯರಾಮ್ ರಾವ್ ಪುತ್ರ **ಚಿ| ರೋಹಿತ್ ರಾವ್** ಮತ್ತು ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಉಂಡಾರು ಕೃಷ್ಣ ಇವರ ಪುತ್ರಿ **ಚಿ| ಸೌ| ಲಾಸ್ಯ ರಾವ್** ಇವರ ವಿವಾಹವು ತಾ.06.02.2022ರಂದು ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ"ದಲ್ಲಿ ಜರಗಿತು.

★★★★ ★★★★

ಶ್ರೀಮತಿ ಪುಳಿನಾದೇವಿ ಮತ್ತು ಶ್ರೀ ರಾಧಾಕೃಷ್ಣ ರಾವ್ ಪುತ್ರ **ಚಿ| ರಕ್ಷಿತ್ ಎ.ಕೆ.** ಮತ್ತು ಶ್ರೀಮತಿ ಮತ್ತು ಶ್ರೀ ಶಂಕರ್ ರಾವ್ ಇವರ ಪುತ್ರಿ **ಚಿ.ಸೌ.ಅಮ್ರಿತ** ಇವರ ವಿವಾಹವು ತಾ.06.02.2022ರಂದು ಚಿಟ್ಪಾಡಿಯಲ್ಲಿರುವ "ಶ್ರೀ ಶಾರದ ದೇವಸ್ಥಾನ ಸಭಾಭವನ" ದಲ್ಲಿ ಜರಗಿತು.

★★★★ ★★★★

ಶ್ರೀಮತಿ ನಾರಾಯಣಿ ಮತ್ತು ಶ್ರೀ ಬೊಳ್ಳಾವ ಸತ್ಯಶಂಕರ್ ಇವರ ಪುತ್ರ **ಚಿ| ವಿದ್ಯಾಶಂಕರ್** ಮತ್ತು ಶ್ರೀಮತಿ ಉಷಾರಾಣಿ ಮತ್ತು ಶ್ರೀ ವೆಲೋರಿ ವೆಂಕಟ ಶಿವರಾಮ ಸುಬ್ರಹ್ಮಣ್ಯ ಶಾಸ್ತ್ರಿ ಇವರ ಪುತ್ರಿ **ಚಿ.ಸೌ.ಸೂರ್ಯಗಾಯತ್ರಿ** ಇವರ ವಿವಾಹವು ತಾ.07.02.2022ರಂದು ಬೆಂಗಳೂರಿನ ಆನೇಕಲ್ ತಾಲೂಕಿನ ಸೃಷ್ಟಿ ವಿಲೇಜ್‌ನಲ್ಲಿ ಜರಗಿತು.

★★★★ ★★★★

## ಬ್ರಹ್ಮೋಪದೇಶ

### ಚಿ| ಶ್ರೇಯಸ್

ಶ್ರೀಮತಿ ವಾಣಿಶ್ರೀ ಮತ್ತು ಶ್ರೀ ವಾಸುದೇವ ಶ್ಯಾನುಭೋಗ್ ದಂಪತಿಯ ಪುತ್ರ **ಚಿ| ಶ್ರೇಯಸ್‌ನ** ಬ್ರಹ್ಮೋಪದೇಶವು ತಾ.23.01.2022 ರಂದು ಮಲ್ಲಮಾರು ತಮ್ಮ ಸ್ವಗೃಹ "ಶ್ರೀನಿವಾಸ" ನಿಲಯದಲ್ಲಿ ಜರಗಿತು.

★★★★ ★★★★

### ಚಿ| ಪರ್ಜನ್ಯ

ಶ್ರೀಮತಿ ಸುಮನ ಮತ್ತು ಶ್ರೀ ಭರತ್ ದಂಪತಿಯ ಪುತ್ರ **ಚಿ| ಪರ್ಜನ್ಯನ** ಬ್ರಹ್ಮೋಪದೇಶವು ತಾ.06.02.2022 ರಂದು ತಮ್ಮ ಸ್ವಗೃಹ ಉಡುಪಿಯಲ್ಲಿ ಜರಗಿತು.

★★★★ ★★★★

### ಚಿ| ಸಮೃಧ್

ಶ್ರೀಮತಿ ಡಾ| ತೇಜಸ್ವಿ ಮತ್ತು ಶ್ರೀ ಡಾ| ಸಂಕೇತ್ ದಂಪತಿಯ ಪುತ್ರ **ಚಿ| ಸಮೃಧ್‌**ನ ಬ್ರಹ್ಮೋಪದೇಶವು ತಾ : 07.02.2022 ರಂದು ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ" ದಲ್ಲಿ ಜರಗಿತು

## ಗೃಹ ಪ್ರವೇಶ

ಉಡುಪಿ ಬೈಲಕೆರೆ ಶ್ರೀಮತಿ ಸರಸ್ವತಿ ಇವರ ಪುತ್ರ ಶ್ರೀ ಸತೀಶ್ ಹಾಗೂ ಶ್ರೀಮತಿ ಸರಸ್ವತಿ ದಂಪತಿಗಳು ಇವರು ಚಾಂತಾರಿನಲ್ಲಿ ನೂತನವಾಗಿ ನಿರ್ಮಿಸಿದ ಗೃಹ "ಜನನಿ" ಇದರ ಪ್ರವೇಶೋತ್ಸವವು ತಾ.05.02.2022 ರಂದು ನೆರವೇರಿತು.

## ಶುಭಜನನ

ಕಾಸರಗೋಡು ಪೆರ್ಲಕ್ಕೆ ಸಮೀಪ ಪಡ್ರ್ಕರಿಯದಲ್ಲಿರುವ ಶ್ರೀ ಬಿ. ಸತ್ಯನಾರಾಯಣ ರಾವ್ ಹಾಗೂ ಶ್ರೀಮತಿ ಸವಿತಾ ಎಸ್.ರಾವ್ ಇವರ ಪುತ್ರ ಪಲ್ಗುಣ ಪಿ.ಎಸ್. ಶ್ವೇತಾ ದಂಪತಿಗಳಿಗೆ ಗಂಡು ಮಗು ಜನನವಾಗಿದೆ.

## ಪುಣ್ಯಸ್ಮರಣೆ : ದಿ| ಭಾಸ್ಕರರಾವ್ ಕೋಲ್ಪೆ



ಕೋಲ್ಪೆ ಕೊಡಂಗೆಯ ಆಯುರ್ವೇದ ಪಂಡಿತ ದಿ| ವೆಂಕಟ್ರಮಣಯ್ಯ ಹಾಗೂ ಭಾಗೀರಥಿಯಮ್ಮ ದಂಪತಿಗಳ ದ್ವಿತೀಯ ಪುತ್ರ ಬೆಂಗಳೂರು ಸಂಜಯ ನಗರ ನಿವಾಸಿ ದಿ| ಭಾಸ್ಕರ ರಾಯರನ್ನು ಅಗಲಿ ಒಂದು ವರ್ಷ ಸಂದ ಸಂದರ್ಭದಲ್ಲಿ ಜಿ.ಕೆ. ಕೋಲ್ಪೆ ಹಾಗೂ ತಮ್ಮಂದಿರು, ತಂಗಿಯಂದಿರು ಮತ್ತು ಕುಟುಂಬಸ್ಥರು ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು.

## ನಿಧನ



ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರು, ಸಲಹೆಗಾರರು, ಉಡುಪಿಯ ಭಾರತ್ ಕನ್‌ಸ್ಟ್ರಕ್ಷನ್‌ನ ಮಾಲಕರಾದ ಪ್ರಫುಲ್ಲಚಂದ್ರರಾಯರು ತಾ.03.02.2022ರಂದು ನಿಧನ ಹೊಂದಿದರು. ಇವರು ತಾಯಿ, ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★★ ★★★★



ಎಲ್ಲೂರು ದಿವಾಕರ ರಾವ್ ಕುತ್ಯಾರು (72 ವರ್ಷ) ಇವರು ತಾ.13.01.2022ರಂದು ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★★ ★★★★



ವಾಶಿ ದಿ| ಶ್ರೀಮತಿ ಇಂದಿರಾ ಹಾಗೂ ದಿ| ಪಿ. ಗೋವಿಂದ ರಾವ್‌ರವರ ಕಿರಿಯ ಪುತ್ರ ಪಾದೆಬೆಟ್ಟು ಅನಿಲ್ ಕುಮಾರ್ ಜಿ.ರಾವ್ (55 ವರ್ಷ) ಇವರು ತಾ.31.01.2022ರಂದು ನಿಧನ ಹೊಂದಿದರು. ಇವರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★★ ★★★★



ದಿ| ವಿಷ್ಣುಮೂರ್ತಿ ರಾಯರ ಪುತ್ರ ಕುಕ್ಕಿಕಟ್ಟೆ ಶ್ರೀಕೃಷ್ಣ ರಾವ್ (60 ವರ್ಷ) ಇವರು ತಾ.09.02.2022ರಂದು ಉಡುಪಿ ಕುಕ್ಕಿಕಟ್ಟೆಯ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★★ ★★★★



ಎಲ್ಲೂರು ಜಗದೀಶ ರಾವ್ (88 ವರ್ಷ) ಇವರು ತಾ.02.02.2022ರಂದು ಕೊರಂಗ್ರಪಾಡಿಯ ತಮ್ಮ ಮಗನ ಮನೆಯಲ್ಲಿ ನಿಧನರಾದರು. ಇವರು ಪತ್ನಿ, ನಾಲ್ವರು ಪುತ್ರರು, ಐದು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.20-02-2022 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.25-02-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.21-02-2022 ಮತ್ತು ತಾ.07-03-2022 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


## ಕುಂಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 12-02-2022 | ಕುಂಭ ಸಂಕ್ರಮಣ | 01-03-2022 | ಮಹಾಶಿವರಾತ್ರಿ |
| 16-02-2022 | ಹುಣ್ಣಿಮೆ | 02-03-2022 | ಅಮಾವಾಸ್ಯೆ |
| 17-02-2022 | ಶಿಶಿರ ಋತು, ಮಾಘ ಮಾಸದ ಕೃಷ್ಣ ಪಕ್ಷಾರಂಭ | 03-03-2022 | ಶಿಶಿರ ಋತು ಫಾಲ್ಗುಣ ಮಾಸದ ಶುಕ್ಲ ಪಕ್ಷಾರಂಭ |
| 20-02-2022 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.52 | 14-03-2022 | ಮೀನ ಸಂಕ್ರಮಣ, ಸರ್ವೈಕಾದಶಿ ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾವರ್ಧಂತಿ |
| 26-02-2022 | ಸ್ಮಾರ್ತೈಕಾದಶಿ | 17-03-2022 | ಹೋಲಿಕಾ ಕಾಮದಹನ |
| 27-02-2022 | ಭಾಗವತ-ವೈಷ್ಣವೈಕಾದಶಿ | 18-03-2022 | ಹೋಲಿ ಹುಣ್ಣಿಮೆ |

With Best Compliments From :

BUILDING DREAMS, ENHANCING LIVES.


NAKSHATRA — GANDHINAGAR —


SOLITAIRE — HATHILL, —


HABITAT ONE 54 An Urban Lifestyle — DEREBAIL —


ANANTESSH — CAR STREET, —

Land® Trades BUILDERS & DEVELOPERS

BUILDING TRUST, DELIVERING VALUE

MANGALURU'S LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

## ಬ್ರಹ್ಮೋಪದೇಶ



### ಚಿ| ಸಮೃಧ್

ತಾ.07.02.2022 ರಂದು ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ" ದಲ್ಲಿ
ಡಾ| ತೇಜಸ್ವಿ ಮತ್ತು ಡಾ| ಸಂಕೇತ್‌ರ ಪುತ್ರ ಚಿ| ಸಮೃಧ್‌ನ
ಬ್ರಹ್ಮೋಪದೇಶಕ್ಕೆ ಆಗಮಿಸಿ, ವಟುವನ್ನು ಹರಸಿದ
ತಮಗೆಲ್ಲರಿಗೂ ಕೃತಜ್ಞತೆಗಳು

ಶುಭ ಕೋರುವ :
ಶ್ರೀಮತಿ ಮತ್ತು ಶ್ರೀ ಶ್ರೀನಿವಾಸ ರಾವ್ ಅಲೆವೂರು
ಡಾ| ಮಮತಾ ಮತ್ತು ಡಾ| ಸನತ್ ರಾವ್
ಶ್ರೀಮತಿ ಸುನೀತಾ ಮತ್ತು ಡಾ| ಬಾಲಕೃಷ್ಣ ರಾವ್
ಶ್ರೀಮತಿ ಸುಧಾ ಮತ್ತು ಡಾ| ಬಿ.ಹೆಚ್.ಆನಂದ ರಾವ್, ಮಣಿಪಾಲ
ಶ್ರೀಮತಿ ಮಮತ ಮತ್ತು ಶ್ರೀ ಬಿ.ಹೆಚ್.ವಾಸುದೇವ ಪ್ರಸಾದ್, ಮಂಗಳೂರು
ಶ್ರೀಮತಿ ಚೈತನ್ಯ ಮತ್ತು ಶ್ರೀ ವಿಘ್ನೇಶ್ ಪ್ರಭು

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ| ರಾ| ಪ್ರತೀಕ್ ಹಾಗೂ ಚಿ| ಸೌ| ಶ್ರೇಯ

ತಾ.27.01.2022ನೇ ಗುರುವಾರ ನೀಲಾವರ
"ಶ್ರೀ ಗಂಗಾ ವಿಶ್ವೇಶ್ವರ ಸಭಾಭನವ"ದಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ
ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

ಶುಭ ಕೋರುವ
ಶ್ರೀಮತಿ ನಾಗವೇಣಿ ಮತ್ತು ಶ್ರೀ ಬೆಳ್ಮಣ್ ಬೈಲುಮನೆ ವಾಸುದೇವರಾವ್
ಮತ್ತು ಸಹೋದರ
ಶ್ರೀಮತಿ ಗೀತಾ ಮತ್ತು ಶ್ರೀ ಜಗದೀಶ ಶ್ಯಾನುಭಾಗ್, ಸಾಂಗ್ಲಿ
ಶ್ರೀಮತಿ ಸಂಪತ್ತಿ ಮತ್ತು ಶ್ರೀ ಗುರುರಾಜ ರಾವ್, ಕೊಡವೂರು
ಶ್ರೀಮತಿ ಪದ್ಮಜಾ ಮತ್ತು ಶ್ರೀ ಸತೀಶ ರಾವ್, ಮುಂಬೈ
ಶ್ರೀಮತಿ ವಿಮಲ ಮತ್ತು ಶ್ರೀ ಬೈಕಾಡಿ ದೇವರಾಜ, ನಾಸಿಕ ಮತ್ತು ಸಹೋದರ
ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಬೈಕಾಡಿ ಪ್ರಕಾಶ್ ರಾವ್ ಮತ್ತು ಸಹೋದರ
ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ತಂತ್ರಾಡಿ ಸಾಬಿಮನೆ ರಾಘವೇಂದ್ರ ಶ್ಯಾನುಭಾಗ್

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ| ಆಕಾಶ್ ಐ.ಪಿ. ಹಾಗೂ ಚಿ| ಸೌ| ಚೈತ್ರ

ತಾ.23.01.2022ನೇ ರವಿವಾರ
ಮೂಡಬಿದ್ರಿ ಬನ್ನಡ್ಕದ ಪಾಂಚಜನ್ಯ ಸಭಾಭವನದಲ್ಲಿ
ಜರಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ,
ನೂತನ ವಧೂವರರಿಗೆ
ಶುಭ ಹಾರೈಸಿದ ತಮಗೆಲ್ಲರಿಗೂ

-: ಶುಭ ಕೋರುವ :-

ಶ್ರೀಮತಿ ಕವಿತಾ ಮತ್ತು ಶ್ರೀ ಬೊಕ್ಕಸ ಚಂದ್ರಶೇಖರ ರಾವ್
ಶ್ರೀಮತಿ ದಿಶಾ ಮತ್ತು ಶ್ರೀ ಬೊಕ್ಕಸ ಚೇತನ್ ರಾವ್
ಶ್ರೀಮತಿ ಶುಭದಾ ಮತ್ತು ಶ್ರೀ ಸುಧೀರ್ ಕುಮಾರ್ ಐ.ಪಿ.

# ಭಾವಪೂರ್ಣ ಶ್ರದ್ಧಾಂಜಲಿ





## ಯು. ಪ್ರಫುಲ್ಲಚಂದ್ರರಾವ್

ಜನನ : 29-03-1961 ನಿಧನ : 03-02-2022

ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿಯ ಸದಸ್ಯರು
ಮತ್ತು ಸರ್ವ ಸದಸ್ಯರು
**ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)**
ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸರ್ವಸದಸ್ಯರು
**ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು**
ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳಿ, ಕಾರ್ಯದರ್ಶಿ
ಮತ್ತು ಸಿಬ್ಬಂದಿ ವರ್ಗ
**ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.), ಉಡುಪಿ**

**ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನ**
ಉಡುಪಿ, ಬ್ರಹ್ಮಾವರ, ಕಾಪು, ಹೆಬ್ರಿ, ಬೈಂದೂರು ತಾಲೂಕು

Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org